ಕೊರವಂಜಿ



Koravanji

ಮಾರ್ಚಿ

೧೯೫೯

★

ಸಂಪಾದಕರು

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಪ್ರಸಾದ್

ಶ್ರೀ|| ದಾಶರಥಿ ದೀಕ್ಷಿತ್

ಶ್ರೀ|| ಪಾಪಿ

ಶ್ರೀ|| ಅ. ರಾ. ಸೆ.

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿಪ್ರತಿ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY
FAS

Koravanji March 1959

ಪ್ಲಾಜಾ - PLAZA

ತಾ|| 27-2-59ರಿಂದ ಅಮೋಘ ಪ್ರಾರಂಭ

ಪ್ಯಾರಾಮೌಂಟ್ ಪಿಕ್ಚರ್ಸ್‌ರವರು

ಸೆಸಿಲ್ ಬಿ ಡಿ ಮಿಲ್ಲೆಯವರ ನೇತೃತ್ವದಲ್ಲಿ

★

ಚಲಚ್ಚಿತ್ರ ಇತಿಹಾಸದಲ್ಲೇ ಮೊಟ್ಟಮೊದಲನೆಯ ಬಾರಿ—ಮಹತ್ತರ ಸಾಧನೆಯನ್ನು ಗಳಿಸಿರುವ. ಮತ್ತೂ 7 ಕೋಟಿ ರೂಪಾಯಿಗಳನ್ನು ವೆಚ್ಚಮಾಡಿ ತಯಾರಿಸಿದ ಅನುಪಮ ಕಲಾಕೃತಿ!

ದಿ ಟೆನ್ ಕಮಾಂಡ್‌ಮೆಂಟ್ಸ್

ವಿಸ್ಟಾವಿಶನ್ ಮತ್ತು ಟೆಕ್ನಿಕಲರ್‌ನಲ್ಲಿ

THE TEN COMMANDMENTS

IN VISTAVISION AND TECHNICOLOUR

ದರಗಳು : (ಬಾಲ್ಕನಿ) ರೂ. 3—39, 3—00

(ಆಡಿಟೋರಿಯಂ) ರೂ. 2—20, 1—41, 0—95

ದಿನವಹಿ 2 ಆಟಗಳು: ಮಧ್ಯಾಹ್ನ 3-30 ಮತ್ತು ರಾತ್ರಿ 8-30ಕ್ಕೆ

ಭಾನುವಾರ ಮತ್ತು ರಜಾ ದಿನಗಳಲ್ಲಿ ಬೆಳಿಗ್ಗೆ 10 ಗಂಟೆ,

ಮಧ್ಯಾಹ್ನ 3-30, ರಾತ್ರಿ 8-30ಕ್ಕೆ

★

ಅಡ್ವಾನ್ಸ್ ಬುಕಿಂಗ್ : ದಿನವಹಿ ಬೆಳಗ್ಗೆ 9 ರಿಂದ ರಾತ್ರಿ 8ರ ವರೆಗೆ

ಮೊದಲಿನ ಮೂರು ತರಗತಿಗಳಿಗೆ ಮಾತ್ರ.

ಬೆಳಿಗ್ಗೆ ಎಚ್ಚರವಾದಾಗ
"ಇನ್ನಷ್ಟು ಹೊತ್ತು ಬೆಚ್ಚಗೆ ಮಲಗೋಣ"
ಎಂಬ ಆಲಸಿಕೆ ಪರಿಹಾರವಾಗಿ ಬಲು ಬೇಗ
ಲವಲವಿಕೆ ತಲೆದೋರಲು

★

ಮೈಸೂರು
ಸ್ಯಾಂಡಲ್ ಸೋಪನ್ನು

ಉಪಯೋಗಿಸಿ

★

ತಣ್ಣೀರಲ್ಲಿ ಒಂದೈದು ನಿಮಿಷ ಸ್ನಾನ ಮಾಡಿರಿ
ಅಬರ ಚೈತನ್ಯಕಾರಿ ಸೊಬಗು ಏನಂತ!!!

★

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು-೩

Statement of ownership of Koravanji (Kannada)

1.	Place of Publication	:	KORAVANJI Balepet, Bangalore-9
2.	Periodicity of Publication	:	MONTHLY 1st of Every Month
3.	Printer's Name	:	Sri B. SREENIVASA IYENGAR,
	Address	:	6, Cottonpet, Bangalore-2.
	Nationality	:	INDIAN
4.	Publisher's Name		Sri B. N. GUPTA,
	Nationality	:	INDIAN
	Address	:	KORAVANJI, Balepet. Bangalore-9.
5.	Editor's Name	:	Dr. M. SIVARAM
	Nationality	:	INDIAN
	Address	:	Balepet, Bangalore-9.
6.	Name and address of Individuals who own the Paper	:	M. SIVARAM Sole Proprietor.

I, M. SIVARAM, hereby declare that the particulars given above are true to the best of my knowledge and belief.

M. SIVARAM

1st March' 59 — *For* Sri B. N. GUPTA

ಕೊರವಂಜಿ

ಸಂಪುಟ ೨೦ ಮಾರ್ಚಿ ೧೯೫೯ ಸಂಚಿಕೆ ೧೨

ಕುಹಕಿಡಿಗಳು

ದಿವಂಗತ ಮೌಲಾನಾ ಆಜಾದರ ಪುಸ್ತಕವನ್ನು ಹದಿನಾಲ್ಕು ಭಾರತದ ಭಾಷೆಗಳಿಗೆ ತರ್ಜುಮೆ ಮಾಡಬೇಕೆಂದಿದ್ದ ಅಕಾಡಮಿಯವರು ಪೂಜ್ಯ ಮಾಸ್ತಿಯವರ ಸಲಹೆ ಕೇಳಿದ್ದಾರೆಂಬುದು ವ್ಯಂಗ್ಯೋಕ್ತಿ ಅಷ್ಟೇ!!

* * *

ಜೈಲಿನಲ್ಲಿದ್ದ ಕೈದಿಗಳು ಆಕಾಶವಾಣಿ ಕಾರ್ಯಕ್ರಮದಲ್ಲಿ ಭಾಗ ವಹಿಸಿದ್ದು ಚೆನ್ನಾಗಿತ್ತಂತೆ.

—ಆಕಾಶವಾಣಿ ಕಾರ್ಯಕ್ರಮದಲ್ಲಿ ಭಾಗ ವಹಿಸುವ ಬಹು ಜನರನ್ನೂ ಜೈಲಿಗೇ ಹಿಂತಿರುಗುವಂತೆ ಕಳಿಸಬೇಕು! ಆಗ ಇನ್ನೂ ಚೆನ್ನಾಗಿರುತ್ತೆ—ಅಲ್ಲವೇ?

* * *

ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷಿಣಿಯಾದರಂತೆ

— ಯಕ್ಷಿಣಿ ಮಾಡೇ ಕಾಂಗ್ರೆಸ್ಸಿಗೆ ಹೊಸ ಹುರುಪು ತುಂಬಬೇಕು — ಈಗ—

* * *

ಇನ್ನು ಮೇಲೆ "ಇಂದಿರಾ ಗಾಂಧಿ ಅಂಚಿನ ಹ್ಯಾಂಡ್ ಲೂಮ್ ಖದ್ದರ್ ಸೀರೆಗಳಿಗೆ ಬಲು ಗಿರಾಕಿ ಬರಬಹುದೇನೋ?

—ಒಡಲು ಕಿರಿದಾದರೂ ಅಂಚು ಬಲ್ಪೆನ್ನು.

ಕೆಲವರು ಗಾಂಧಿ ಟೋಪಿ ಹಾಕಿದವರು ಸಭೆಯಲ್ಲಿ ಸತಾಯಿಸಲ್ಪಟ್ಟಾಗ ಅವರ ಟೋಪಿಕೂಡ ಕೆಂಪೇರಿ ರಷ್ಯದ ಕಡೆಗೆ ತಿರುಗುತ್ತದೆ ಎನ್ನುವುದು ಬರೀ ಊಹಾ ಪೋಹ.

* * *

ನಮ್ಮ ಕಾಲಟಿಯಲ್ಲಿ ಹುಟ್ಟಿದ ಶಂಕರ, ನನ್ನದು ಯಾವುದೂ ಇಲ್ಲ ಎಲ್ಲವೂ ಅವನದೇ ಅಂತ ಸರ್ಕಾರವನ್ನು ಕುರಿತು ಹೇಳಿದ್ದು ಎಂದು ನಂಬೂದರಿಪಾದರವರು ಇನ್ನೂ ಹೇಳಿಲ್ಲವಂತೆ.

* * *

ಅಖಿಲ ಭಾರತ ದನ ಮತ್ತು ಕುಕ್ಕುಟ ಪ್ರದರ್ಶನ ಬೆಂಗಳೂರಲ್ಲಿ ನಡೆದಾಗ ಭಾರಿ ಗೂಳಿಯೊಂದಕ್ಕೆ ಜನರು "ನಂದೀಕೇಶ್ವರ" ಎಂದು ಹೇಳಿಕೊಳ್ಳುತ್ತಾ ನಮಸ್ಕಾರ ಮಾಡಿದರಂತೆ.

—ಆದರೆ ಜನನಾಯಕ ಪುಢಾರಿಗಳು ಕೋಳಿಗಳ ಮುಂದೆ ಅಡ್ಡಾಡಿದಾಗ ಅದೇ ಜನರು "ಜಂಭದ ಕೋಳಿ" ಅಂತ ಕೇಕೇ ಹಾಕಿದರಂತೆ.

* * *

ಅಖಿಲ ಭಾರತ ಕುಕ್ಕುಟ ಪ್ರದರ್ಶನದಲ್ಲಿ, ಒಂದು ಜೋಡಿ ಭರ್ಜರಿ ಕೋಳಿಗಳಿವೆಯಂತೆ. ಹೆಂಡತಿಯನ್ನು ಕರೆಯಬೇಕಾದಾಗ ಗಂಡು ಕೋಳಿ ನೆಲವನ್ನು ಕಾಲಿನಿಂದ ತಾಳ ತಟ್ಟುತ್ತಂತೆ. ತಕ್ಷಣ ತಲೆಯನ್ನು ರೆಕ್ಕೆಯ ಒಳಗಿಟ್ಟು ಕೊಳ್ಳುತ್ತದೆ.

—ಎಂಥ ಜಾಣ ಕೋಳಿ!! ಎಂತಹ ಹುಷಾರು ಮಾರ್ಗ!!!

* * *

ಆರು ಜನ ಮಕ್ಕಳಿದ್ದಾತನೊಬ್ಬ ಎರಡನೆ ಪ್ಲಾನ್ ಪೀರಿಯಡ್ಡಿನಲ್ಲಿ ಪ್ಲಾನ್ ಮಾಡಿ ಇಬ್ಬರು ಹೊಸ ಮಕ್ಕಳನ್ನು ಪಡೆದನಂತೆ.

* * *

ಶ್ರೀ ಕ್ರುಶ್ಚೇವರು ಸೂರ್ಯನ ಸುತ್ತ ದಶಮ ಗ್ರಹವನ್ನು ತ್ರಿಶಂಕುಸೃಷ್ಟಿ ಮಾಡಿದ್ದು ಹೆಚ್ಚಲ್ಲ. ಆದರೆ ಅರಿಶಿನ ಬಣ್ಣದ ಚೀಣೀಯರನ್ನು ಕೆಂಬಣಕ್ಕೆ ತಿರುಗಿಸಿದ್ದು ಅಮೋಘ. ಅಷ್ಟೇ ಅಲ್ಲ ಕಪ್ಪನ್ನು ಕೆಂಪು ಮಾಡಿದಾಗ ಸ್ವರ್ಗ!!!

* * *

ಮಾಕ್ಸ್‌ಮಿಲನ್ನರು ಕ್ರುಶ್ಚೇವ್‌ರ ಕೈಕುಲುಕುವ ಚಿತ್ರವನ್ನು ನೋಡಿ,ಡಲ್ಲೆಸ್ಸರ ಕ್ಯಾನ್ಸರ್ ಉಲ್ಬಣಗೊಂಡಿತೆಂಬುದು ಸುಳ್ಳು!

ಉರಿಗಾಳು

ಕ್ರಿಕೆಟ್ ಆಟದಲ್ಲಿ ಮೂರು ಚಾನ್ಸರುಗಳನ್ನು ಅಥವಾ ಮೂರು ಬೀವರುಗಳನ್ನು ಬೌಲ್ ಮಾಡಿದರೆ, ಪಾಕಿಸ್ಥಾನದಲ್ಲಿ ಆಟವಾದ ಮೇಲೆ ಬೌಲ್ ಮಾಡಿದವನ ತಲೆಗೆ ಬೀವರ್ ತಾಕಿಸಿ ಚಾನ್ಸು ಮಾಡುತ್ತಾರೇನೋ ಎಂಬ ಭಯದಿಂದ ಗಿಲ್‌ಕ್ರಿಸ್ಟ್ರವರನ್ನು ಪಾಕಿಸ್ಥಾನದ ಆಟಕ್ಕೆ ಕರೆದುಕೊಂಡು ಹೋಗಲಿಲ್ಲ ಎಂದೆನ್ನುವುದು ಶುದ್ಧ ಕುಹಕ !

*　*　*

ವೆಸ್ಟ್ ಇಂಡೀಸ್ ಟೀಮಿನವರು ಇನ್ನು ಮುಂದೆ ಭಾರತದ ಪ್ರವಾಸ ಮಾತ್ರ ಮಾಡೋಣ, ಪಾಕೀಸ್ಥಾನದಲ್ಲಿ ಬೇಡ ಎಂದು ಇನ್ನೂ ಹೇಳಿಲ್ಲವಂತೆ.

*　*　*

ಈ ವರ್ಷದ ಮೊರಾರ್ಜಿ ಭಾಯ್ ಬಡ್ಜೆಟ್ ಹೇಗಿರಬಹುದು ಎಂದು ವಾಚಕರೊಬ್ಬರು ಕೇಳಿದ್ದಾರೆ

—ಸ್ಥೂಲವಾಗಿ ಹೇಳುವುದಾದರೆ ಕೊರೆಯುತ್ತಿರುತ್ತೆ ಅನ್ನಬಹುದು.

*　*　*

ಕೋಲಾರದ ಚಿನ್ನದ ಗಣಿಗಳು ಹಣ ತರಬಲ್ಲವು—ಸರಕಾರ ಮೊದಲು ತಂದರೆ

*　*　*

ಮಾರಿ ಕಣಿವೆಯಲ್ಲಿ ಮುಂದ್ರಾ ಮುಂದ್ರಾ ಅಂತ ಈಗ ಕೂಗಿದರೆ

—ಚೀಚಮ್ಮ ಚೀಚಮ್ಮ ಅಂತ ಮಾರ್ದನಿ ಬರುತ್ತದಂತೆ. ಸುಳ್ಳಿರಬೇಕು.

*　*　*

ರಾಜಾಜಿಯವರ ಪುಸ್ತಕಕ್ಕೆ ಅಕಾಡಮಿ ಬಹುಮಾನವನ್ನು ನೆಹ್ರೂಜಿಯವರು ಸ್ವಹಸ್ತದಿಂದ ಕೊಡಬೇಕಾಗಿತ್ತಂತೆ.

—ಉಭಯ ಕುಶಲೋಪರಿ ಹೋದ ತಿಂಗಳು ಆದಕಾರಣ ಪುನರ್ಭೇಟಿ ಅನವಶ್ಯಕ ಎಂದು ತೀರ್ಮಾನಿಸಲಾಯಿತೆನ್ನುವುದು ಕುಹಕ !

*　*　*

ಕಾಂಗ್ರೆಸಿನವರು ಪಾದಯಾತ್ರೆ ಮಾಡಬೇಕೆಂದು ಮೇಲ್ಸೂಚನೆ ಬಂದಿದೆಯಂತೆ

—ನಾವೇನು ಕಡಿಮೆ ಎಂದು ನಂಬೂದರಿ ಪಾದ್ ಯಾತ್ರೆ ಮಾಸ್ಕೋತನಕ ಮಾಡಿದರಂತೆ.

* * *

ಭಾರತರ ಸಾಹಿತ್ಯ ಅಕಾಡಮಿಯವರು ರಷ್ಯದ ಬೋರಿಸ್ ಪ್ಯಾಸ್ಟರ್ ನಾಕ್ ಅವರನ್ನು ಅಧ್ಯಕ್ಷರನ್ನಾಗಿ ಆಹ್ವಾನಿಸುವರೆಂಬುದು ಸುಳ್ಳಂತೆ.

* * *

ಅಂಬರ್ ಚರಕದ ನೂಲು ಕಮ್ಮಿಟಿಗಾದರೆ ದಿಗಂಬರ್ ಚರಕದ ನೂಲು ಗೊಮ್ಮಟನಿಗೆ ಮೀಸಲು !!

* * *

ಚಾರ್ಮುಡಿ ಘಾಟ್ ರಸ್ತೆಯಲ್ಲಿ ಸಚಿವರುಗಳ ಪ್ರವಾಸ ಹೆಚ್ಚಾದ ಕಾರಣ ಚಾಮರ್ಡಿ ಘಾಟಿ ಎಂದು ಕರೆಯುತ್ತಾರೆಂಬುದು ಖಚಿತವಲ್ಲವಂತೆ.

* * *

ಬೇಲೂರಿನ ಶಿಲಾ ಬಾಲಿಕೆಯರು ಸಮತಾ ಸಮಾಜದ ಪ್ರಯುಕ್ತ ಶಿಲೆಯಂತೆ ಥಂಡಾ ಆಗಿರುವರಂತೆ.

* * *

ಮೂವತ್ತು ಸಾವಿರ ಟನ್ನುಗಳಷ್ಟು ವಿಮಾನಗಳು, ಮಾರಾಟದ ಸೌಕರ್ಯ ವಿಲ್ಲದೆ ಮಂಗಳೂರಂಚಿನಲ್ಲಿ ಗೊಬ್ಬರವಾಗಿ ಪರಿಣಾಮಕೊಳ್ಳುವುದಂತೆ

—ಜನರು ಅವನ್ನು ತಿಂದ ಮೇಲೂ ಕಡೆಗೆ ಅಷ್ಟೆ ಅಲ್ಲವೇ ?

* * *

ಕಾರ್ಕಳ, ಯೇನೂರು ಬೆಳಗೊಳದ ಗೊಮ್ಮಟರನ್ನು ಕಂಡವರು ನಮ್ಮೂರು ಕೂಲಿಗಳು ಜೈನ ಮತದವರೇನೋ ಎಂದು ಶಂಕೆಪಟ್ಟರಂತೆ.

* * *

ಹುಟ್ಟಿದ ಊರಿನ ಹೆಸರನ್ನು ಲಂಬಾಣಿಗಳು ಮಕ್ಕಳಿಗಿಡುವರಂತೆ

—ಗುಬ್ಬಿ ಹೆಬ್ಬಾಲೆ ಇಂತಹ ಹೆಸರುಗಳು ಮರಕಳಿಸದಿರುವಂತೆ ಅವರು ಬೇರೆ ಕೇರಿಗೆ ಬೇಗ ಬೇಗ ಹೋಗುವರೇನೋ ಅಲ್ಲವೇ ?

* * *

"ಜನಮತವೇ ಜನಾರ್ದನನ ಮತ"—ಎಂದು ಜನನಾಯಕರು ಘೋಷಿಸಿದರಂತೆ, ಗೆದ್ದಾಗ.

ರಸ್ತೇಲಿ ರಂಗೋಲಿ

ನಮ್ಮೂರಿನ ಹಿರಿಯ ಕಾಲೇಜಿನ ಎದುರಲ್ಲಿರುವ ಡಾಮರು ಬಳಿದ ರಸ್ತೆಯಲ್ಲಿ (ಅರ್ಥವಾಯ್ತೇ ಟಾರ್ ಹಾದಿ ಅಂತ) ಮುಸ್ಸಂಜೆ ಆರು, ಆರೂವರೆ ಗಂಟೆಗೆ ಹುಚ್ಚನಂತಿರುವ ಹದಿನೆಂಟು ಇಪ್ಪತ್ತರ ಪ್ರಾಯದ, ಕೆದರಿದ ಕೂದಲಿನ, ಹರುಕು ತೊಡಿಗೆಗಳ, ಒಬ್ಬಾತ ರಸ್ತೆಯ ಒಂದಂಚಿನಲ್ಲಿ ಬಣ್ಣ ಬಣ್ಣದ ರಂಗೋಲಿ ಡಬ್ಬಗಳನ್ನಿಟ್ಟುಕೊಂಡು "ರಾಮ ಪಟ್ಟಾಭಿಷೇಕ",...."ಆಂಜನೇಯ ಸಮುದ್ರವನ್ನು ದಾಟಿದುದು"—"ದ್ರೌಪದಿ ವಸ್ತ್ರಾಪಹರಣ"—"ದಂಡೀ ಯಾತ್ರೆ" ಇತ್ಯಾದಿ ಚಿತ್ರಗಳನ್ನು ಸಾಕಷ್ಟು ಚೆನ್ನಾಗಿ ರಚಿಸುತ್ತ ಕುಳಿತಿರುತ್ತಾನೆ.

ಕಚೇರಿಯಿಂದ ಹಿಂತಿರುಗುವ ಮಧ್ಯಮ ವರ್ಗದ ನೌಕರರೆಲ್ಲಾ ಸುತ್ತ ನಿಂತು ಈ ದೃಶ್ಯವನ್ನು ಎವೆಯಿಕ್ಕದೆ ನೋಡುತ್ತಿರುತ್ತಾರೆ.

ಚಿತ್ರವನ್ನೆಲ್ಲಾ ಮುಗಿಸಿದಮೇಲೆ ಆ ಯುವಕ ಐದು ನಿಮಿಷ ಸ್ವಲ್ಪ ದೂರ ನಿಂತು ಚಿತ್ರವನ್ನು ನೋಡುತ್ತಾನೆ. ತದನಂತರ ತನ್ನ ಹೆಗಲಮೇಲಿನ ಟವಲಿನಿಂದ ಎಲ್ಲವನ್ನೂ ಬೇಗ ಗುಡಿಸಿ ಹೆಹ್ಹೆಹೊ ಎಂದು ವಿಕಾರವಾಗಿ ಕೂಗುತ್ತಾ ಪಕ್ಕದ ಕಾಂಪೌಂಡ್ ಹಾರಿ ಓಡಿ ಹೋಗುತ್ತಾನೆ.

*   *   *

"ಹುಚ್ಚ—ಇವನಿಗೆ ದೈವದತ್ತವಾಗಿರುವ ಕಲಾ ಕುಶಲತೆಯನ್ನು ಅಭಿವೃದಿ ಪಡಿಸಿಕೊಂಡು ದೇಶಕ್ಕೆ ಕೀರ್ತಿ ತರಬಾರದೇ"

"ಏನು ಅಪಘಾತ ಆಯಿತೋ ಇವನ ಮನಸ್ಸಿಗೆ—ಪಾಪ! ಹೀಗೆ ಹುಚ್ಚು ಹಿಡಿದಿದೆ. ಊಟಕ್ಕೆ ಏನು ಮಾಡುತ್ತಾನೋ!"

"ನಾಟಕ, ಸಂಗೀತ, ಸಾಹಿತ್ಯ ಅಕಾಡೆಮಿಯವರು ಇಂತಹ ಸ್ಫೂರ್ತಿಯವರನ್ನು ಪತ್ತೆ ಹಚ್ಚಿ ಮುಂದಕ್ಕೆ ತರಬೇಕು. ಎಂತಹ ಸರ್ಕಾರವೊ ನಮ್ಮದು. ಕಾಲ ಎಲ್ಲಾ ಕೆಟ್ಟು ಹೋಯಿತು"

"ಕಮ್ಯೂನಿಸಂ ಬಂದರೇ ಇಂತಹವರಿಗೆಲ್ಲಾ ಅವಕಾಶಾಪ್ಪ—ಇಲ್ಲದಿದ್ದರೆ ಬಡವರ ಉದ್ಧಾರ ಹೇಗಾದರೂ ಆದೀತು."

ಇತ್ಯಾದಿ ಇತ್ಯಾದಿ ಸುತ್ತ ನೆರೆದ ಜನ ಅಂದು ಆಡಿಕೊಳ್ಳುತ್ತಾರೆ. ನಾನೂ

ಇದನ್ನೇ ತಿಂಗಳ ಮೊದಲ ಮೂರು ನಾಲ್ಕು ದಿನ ನೋಡಿದೆ. ನಂತರ ಆ ಹುಚ್ಚ ಆ ರಸ್ತೆಯಲ್ಲಿ ಬರಲೇ ಇಲ್ಲ ಆದರೆ ಮುಂದಿನ ತಿಂಗಳು ತಿರುಗಿ ಹಾಜರು ಆತ ರಸ್ತೆಯಲ್ಲಿ ತಿರುಗಿ ಜನ ಗುಂಪು ಕೂಡಿತ್ತು. ಎಲ್ಲವೂ ಯಥಾಪ್ರಕಾರ ನಡೆಯಿತು. ಕಡೆಗೆ ಆವನು ಟವಲಿನಿಂದ ಬರೆದ ಚಿತ್ರ ಗುಡಿಸಿ ಕಾಂಪೌಂಡ್ ಹಾರಿ ಹೋದಾಗ ಅವನ ಹಿಂದೆ ನಾನೂ ಓಡಿದೆ.

ಅವ ಹತ್ತಿರದ ದೊಡ್ಡ ಕಟ್ಟಡದ ಹಿತ್ತಲಕಡೆಗೆ ಓಡಿದ. ಅಲ್ಲಿ ಒಂದೆರಡು ಬಾಳೆ ಗಿಡಗಳಿದ್ದುವು. ಕಲ್ಲು ಬೆಂಚೊಂದಿತ್ತು. ಅದರ ಮೇಲೆ ಕುಳಿತ. ನಾನು ಈ ಬದಿಯಲ್ಲಿದ್ದ ಅಶ್ವತ್ಥಮರದ ಕೆಳಗೆ ನಾಗರಕಲ್ಲಿನ ಹಿಂದೆ ಅವಿತು ಕುಳಿತೆ. ನೇರ ನಾಗಿ ಮಾತನಾಡಿಸಲು ಹುಚ್ಚ ಎಂಬ ಹೆದರಿಕೆ—

ಆತ ಕಿವಿ ಹಿಂದಿನಿಂದ ಒಂದು ಸಿಗರೇಟ್ ತೆಗೆದ. ಹಚ್ಚಿಸಿ ಹೊಗೆ ಎಳೆದ. ಆ ಕೆಂಪಾನೆ ಬೆಳಕಿನಲ್ಲಿ ಅವನ ಮುಖ ಶಾಂತಿಯುತವಾಗಿತ್ತು. ಹುಚ್ಚ ನಂತೆ ಕಾಣಿಸಲೇ ಇಲ್ಲ.

ಕಾಲು ಸಪ್ಪಳ ಕೇಳಿಸಿತು. ಯಾರೋ ಬರುತ್ತಿದ್ದರು ಬಂದರು. ಬಂದು ಇಬ್ಬರೂ ಹುಚ್ಚನ ಸುತ್ತ ಕುಳಿತರು. ತಮ್ಮ ಒಳಜೇಬಿನಿಂದ ಏನೇನನ್ನೆಲ್ಲಾ ಹೊರಕ್ಕೆ ತೆಗೆದು ಕಲ್ಲುಬೆಂಚಿನ ಮೇಲಿಟ್ಟರು. ಎರಡು ಮೂರು ಪರ್ಸುಗಳು— ೪-೫ ಫೌಂಟನ್‌ಪೆನ್ನುಗಳು, ಏಳೆಂಟು ಕರವಸ್ತ್ರಗಳು, ಒಂದು ಹಿಡಿ ಚಿಲ್ಲರೆ ಹಣ, ಒಂದುಂಗುರ—ಇತ್ಯಾದಿಗಳೆಲ್ಲಾ ನನಗೆ ಕಾಣಿಸಿದುವು.

ಆಗ ಹುಚ್ಚ ಅಂದ "ಈ ದಿನದ ಸಂಪಾದನೆ ಪರವಾಗಿಲ್ಲ" ಅಂತ. "ನಾವೇನು ಸಾಮಾನ್ಯ ಜೇಬು ಕಳ್ಳರೇ? ಸುತ್ತ ನೆರೆದಿದ್ದವರೆಲ್ಲಾ ನಿನ್ನ ರಂಗೋಲಿ ಚಿತ್ರ ನೋಡುತ್ತಿರುವಾಗ ನಾವೂ ಅವರ ಮಧ್ಯೆ ಅದುಮಿಕೊಂಡು ನಿಂತು ಇಷ್ಟನ್ನೂ ಹೊಡೆದೆವು" ಎಂದು ಅವರಿಬ್ಬರೂ ಆತ್ಮಪ್ರಶಂಸೆ ಮಾಡಿಕೊಂಡಾಗ ಹುಚ್ಚ ಅಂದ. "ಗುಂಪಿನಲ್ಲಿ ಸೇರಿಕೊಂಡು ನೀವು ಹೊಡೆದಿದ್ದು ಏನು ಮಹಾ, ರಂಗೋಲಿ ಚಿತ್ರ ಬರೆದ ಮೇಲೆ ದೂರ ನಿಂತು ಚಿತ್ರನೋಡಿ, ಹೆಗಲ ಮೇಲಿನ ಟವಲನ್ನು ಎಳೆದು ಕೊಂಡು ಚಿತ್ರ ಗುಡಿಸೋವಾಗ, ನನ್ನ ಪಕ್ಕದಲ್ಲಿದ್ದವನ ಪರ್ಸನ್ನು ಒಳಜೇಬಿನಿಂದ ಟವಲಿನೊಳಕ್ಕೆ ಸೆಳೆದುಕೊಂಡೆ—ನೋಡಿ" ಎಂದು ದೊಡ್ಡ ಪರ್ಸನ್ನು ತೋರಿಸಿದ.

ಆಗ ನನಗನ್ನಿಸಿತು.

ಇಂತಹ ಕಲಾ ಕುಶಲಿಗಳಿಗೆ ಸರ್ಕಾರ ಏನು ತಾನೇ ಪ್ರೋತ್ಸಾಹ ಕೊಡ ಬಹುದು.

—ಕಳ್ಳರ ಸಂತೇಲಿ, ಯಾರಿಗೆ ಯಾರು?—

—ಪ್ರಸಾದ್

ಗಾಂಪರ ಗುಂಪು

"ಗಾಂಪುರುಡರು ಶಿಷ್ಯರ ಜೊತೆ ಲಂಡನ್ನಿಗೆ ಹೊರಟಿದ್ದಾರೆ" ಅನ್ನುವ ಸುದ್ದಿಯನ್ನು ಸುಬ್ಬಣ್ಣ ಹೊರಗೆಡಹಿದ. ಇಡೀ ಬ್ಯೂಗಲ್ ರಾಕ್‌ರಾಕೇ ಕ್ಷಣ ಮಾತ್ರ ಅದುರಿತು. ಅದರ ಬದಿಯ ದೊಡ್ಡ ಹಾಸು ಬಂಡೆಯ ಮೇಲೇ ಸುಬ್ಬಣ್ಣ ಈ ವಾರ್ತೆಯನ್ನು ತಿಳಿಸಿದ್ದು.

"ಛೆ ಛೆ—ಸ್ವರಾಜ್ಯ ಬಂದಮೇಲೆ ಎಂಥೆಂಥಾವರಿಗೆ ಪರದೇಶ ಪ್ರಯಾಣದ ಛಾನ್ಸು ಸಿಕ್ತಾ ಇದೆಯಲ್ಲಾ"—ಎಂದು ಪೇಚಾಡಿದ ಗುಂಡಣ್ಣ.

"ಎಲಾ ಇವನಾ—ಅದಕ್ಯಾಕೆ ಹಂಗೆ ಹೊಟ್ಟೆವಳಗೆ ಮೆಣಸಿನ ಹೂರಣ ಹೊಕ್ಕ ಹಂಗೆ ಆಡ್ತೀಯಲೆ—ಎಂಥೆಂಥಾ ಗಾಂಪರೋ ರಾಜ್ಯನೇ ಆಳಲಿಕ್ಕೆ ಹತ್ಯಾರಂತೇ—ನಮ್ಮ ಗಾಂಪ ಹೋಗವಲ್ಲನ್ಯಾಕೆ ಬಿಡ್ರಿ"—ಎಂದು ಬೀಡಿ ಹಚ್ಚಿದ ನಾಡಕರ್ಣಿ.

"ಅಲ್ಲಾ ಮಿಸ್ಟರ್ ನಾಡಕರ್ಣಿ—ನೀವು ಹೇಳೋದನ್ನ ನಾವು ಒಪ್ಪಿಕೊಂಡ್ರೂ—ಜನಬಲದಿಂದ ಬಂದು ಮಂತ್ರಿಗಳಾ ನೋಡು ಡೆಮಾಕ್ರಸಿ ಅಲ್ಲವೆ? ಅಂದಮೇಲೆ ಆರಿಸಿದ ಜನಾ ಗಾಂಪರೋ ಆರಿಸಿ ಬಂದ ಮಂದಿ ಗಾಂಪರೋ ಅನ್ನೋದನ್ನ ನಾವು ವಿಚಾರಿಸಬೇಕು. ಹಾಗೆ ವಿಚಾರ ಮಾಡಿದಾಗ ಕನ್ನಡೀಲಿ ನೋಡಿಕೊಂಡು ಬೈದಹಾಗೆ ಅಲ್ಲವೆ?....ಯೋಚನೆ ಮಾಡಿ"—ಎಂದು ನೆಶ್ಯ ಏರಿಸಿದರು ವೆಂಕಪ್ಪಯ್ಯನೋರು.

"ಅಂತೂ ಒಟ್ಟಿನಲ್ಲಿ ಯಾರು ಲಂಡನ್ನಿಗೆ ಹೋಗಿದ್ದರೂ ಗಾಂಪರ ಗುಂಪಿನ ಹಾಗೇ ಇರ್ತಾ ಇತ್ತೂಂತ ಒಂದ ತೀರ್ಮಾನಕ್ಕೆ ಬಂದು ಬಿಡೋಣವೆ?—ಎಂದು ಈ ಮಾತಿನ ಮಾಲೆಗೇ ಮೊಟಕು ಹಾಕಿ ಬಿಡುವ ಆತುರದಲ್ಲಿ ಮಾತಾಡಿದರು ಮಾದೇವಪ್ಪನವರು.

"ಅದು—ಅದು ರಾಜಾ ಮಾತು. ಯಾರು ಹೋದರೇನು ಬಿಟ್ರೇನು ಬಂದ ಭಾಗ್ಯ ನಮಗೇನೂ ಇಲ್ಲ. ಆದರೆ ಈ ಗಾಂಪರೊಡೆಯರ ಗುಂಪು ಇದೆಯಲ್ಲಾ—ಈ ಗುಂಪು ಹೋಗೋದರಿಂದ ನಮಗೆಲ್ಲಾ ಲಾಭ ಉಂಟು." ನಿಧಾನವಾಗಿ ಹೇಳಿದ ರಾಜುನಾಯ್ಡು.

"ನಮಗೇನು ಲಾಭಾ ರಾಜೂನಾಯ್ಡೂ....ನಾವು ಕೊಟ್ಟ ತೆರಿಗೇನ ಸ್ಟರ್ಲಿಂಗ್ ಮಾಡ್ಕೊಂಡು ಲಂಡನ್ನಿನಲ್ಲಿ ಈ ಗಾಂಪರ ಪಲ್ಲಕ್ಕಿ ಉತ್ಸವ ಟ್ರಿಫಾಲ್ಗರ್ ಚೌಕದಲ್ಲಿ ನಡಸ್ತಾ ಇದ್ರೆ ಯಾರ ಪರ್ಸ್ಸು ಕಚ್ಕೋದು—ನಿಮಗೇನಾದ್ರೂ ಪರಿಜ್ಞಾನವಿದೆ ಯೇನು? Tax-payer's Money is wasted on Gampa's Gumpu...." ಎಂದು ಕಣ್ಣಲ್ಲಿ ಕಿಡಿ ಕಾರುತ್ತಾ ಸಂಕಟಪಟ್ಟ ಸುಬ್ಬಣ್ಣ.

"ಯಾರು ಯಾರೇ ಹೋದರೂ ಒಂದು ಗಂಟೆ ಒಂದು ವಾರ್ತೆ ಬಂದು ನಮ್ಮ ದೇಶ ನೆನಸಿಕೊಳ್ಳುತ್ತಾ ಇರುವಂಥಾ ಕೆಲಸ ಮಾಡ್ತಾರೆಯೇ ? ಇಲ್ಲ ನಮ್ಮ ಗಾಂಪರು ತಮ್ಮ ದೇಶದ ಒಂದು ನಿಶಾನಿ ಸ್ಥಾಪಿಸಿ ಬರ್ತಾರೆ. ಒಟ್ಟಿನಲ್ಲಿ ನಮಗೆ ಆಗೋ ಒಂದು ಲಾಭವಂತೂ ನಿಜ "ಎಂದು ಮತ್ತೆ ಸುಮ್ಮನಾದ ರಾಜುನಾಯ್ಡು.

"ಅದೇನು ಲಾಭ ಹೆಳ್ಯ್ಯಾರಾಹೇಳೋ ನಿನ್ನ ಮನಿ ಜ್ವಾಳಾಗ "ಎಂದ ನಾಡಕರ್ಣಿ.

"ಬೊಗಳೋ ಭಢವ" ಬೈದ ವೆಂಕಪ್ಪ.

"ಆತುರಬೇಡ ಹೇಳ್ತೀನಿ... ಮತ್ತೆ ಅವರು ಎಷ್ಟು ದಿನವಂತೆ ಇಂಗ್ಲೆಂಡಿನಲ್ಲಿ ಇರೋದು ? ಹೇಳು ಸುಬ್ಬಣ್ಣ "

"ಅದೇನೋಪ್ಪ ವರ್ಷವೋ ಆರು ತಿಂಗಳೋ ಅಂತಿದ್ದ ಅವರ ಪಟ್ಟ ಶಿಷ್ಯ ಮಡೆಯ ..."

"ಸರಿ ಆರು ತಿಂಗಳೂಂತ್ಲೆ ಇಟ್ಕೊಳ್ಳೋಣ ಆಯ್ತು ಆರು ತಿಂಗಳಾದರೂ ನಮ್ಮ ಕೇರಿ ನಮ್ಮ ವಠಾರ ನಮ್ಮ ಅಂಗಡಿಬೀದಿಯಲ್ಲಿ ಶಾಂತಿ ನೆಮ್ಮದಿ—ನಿದ್ರೆ ಆರಾಂ ಸಿಕ್ಕು ಕಿರುಕುಳು—ಕೇಕೆ—ಕೆಟ್ಟ ಹುಚ್ಚುನಗೆ—ಆ ಗಾಂಪರ ಆಶ್ರಮದ ಅವಾಂತರ ಇವುಗಳಿಂದ ಮುಕ್ತಿ ಹೊಂದುವುದರಲ್ಲಿ ಸಂದೇಹವಿದೆಯೆ ?" — ಎಂದು ರಾಜುನಾಯ್ಡು ಹೇಳಿದಾಗ ಎಲ್ಲಬಾಯಿಗೂ ಕುಕ್ಕೆ ಬಿಗಿದಂತೆ ಆಗಿತ್ತು. ನಿಜವಾದ ಮಾತು ಅದು. ಮಂಕ ಮರ ಹತ್ತಿ ಮಾವಿನ ಹೀಚು ಕದಿಯುವುದು ತಪ್ಪುವುದು— ಮಡೆಯ ತೆಂಗಿನ ಮರದಲ್ಲಿ ಹುಲ್ಲು ಕಿತ್ತುವ ಕಾಟವಿರುವುದಿಲ್ಲ. ಮುಟ್ಠಾಳನ ಭಾರತ ವಾಚನದಿಂದ ಭಯಪಡುತ್ತಿದ್ದವರು ಹಾಯಾಗಿ ಕಾಲುಚಾಚಿ ನಿದ್ರಿಸಬಹುದು ! ಸಾಕ್ಷಾತ್ ಗಾಂಪರೊಡೆಯರೇ ಮಾಡುತ್ತಿದ್ದ ಉಪದೇಶದಿಂದ ಅವರ ಶಿಷ್ಯ ಮಂಡಲಿಗೇ ಸೇರಲು ಆತುರ ಪಡುತ್ತಿದ್ದ ನಮ್ಮ ಕೇರಿಯ ಹೈಕಳನ್ನು ಹೈಸ್ಕೂಲಿನ ದಾರಿಗೆ ದಬ್ಬಬಹುದೋ? ಈ ಎಲ್ಲ ಉಪಕಾರ ಒಮ್ಮೆಲೇ ಆಗುತ್ತಿತ್ತು ಶ್ರೀಯುತರ ಇಂಗ್ಲೆಂಡ್ ಪ್ರವಾಸದಿಂದ. ಇದೊಂದು ದೃಷ್ಟಿಯಿಂದ ಗಾಂಪರೊಡೆಯರು ಇಂಗ್ಲೆಂಡಿಗೆ ಹೋಗುವುದು ಒಳ್ಳೆಯದೇ ಎಂದೆನಿಸಿತ್ತು ಅಲ್ಲಿ ಸೇರಿದ್ದ ಪೆನ್‌ಶನ್ ದಾರರ ಸಭೆಗೆ.

ಇದರ ಜೊತೆಗೆ ಮತ್ತೊಂದು ವಿಷಯವನ್ನೂ ವಿವೇಚಿಸಬೇಕಾಗಿತ್ತು. ಹೋದವರು ಹಾಗೇ ಹೋಗದೆ ಮತ್ತೆ ಹಿಂದಿರುಗುವರಲ್ಲಾ ಎಂಬುದು ಮಹತ್ವದ ಪ್ರಶ್ನೆಯಾಗಿತ್ತು. ಏನಾದರೂ ಮಾಡಿ ಅವರುಗಳು ಅಲ್ಲೇ ಇರುವಂತೆ ಮಾಡಲು ಬ್ರಿಟನ್ನಿನ ಸ್ಕಾಟ್‌ಲೆಂಡ್ ಯಾರ್ಡ್‌ರವರಿಗೆ ಒಂದು ಮೂಗರ್ಜಿ ಬರೆದುಬಿಟ್ಟರೆ ಆಯ್ತು ಅನ್ನುವವರಿಗೆ ಯೋಚಿಸಿದ್ದ. ಹಲ್ಲಿದ್ದರೂ ಅಗಿಯಲಾರದ ಕೃತಕದಂತೆ ವೆಂಕಪ್ಪಯ್ಯ ಇದೇ ಯೋಚನೆ ಒಬ್ಬರನ್ನೂ ಆವರಿಸಿ ಎಲ್ಲರೂ ಮೌನವಾಗಿ ಕೂತು ಬಿಟ್ಟರು.

ಪೊದರು ಮಿಾಸೆಯಲ್ಲಿ ಕೆಂಜಗ ಸೇರಿತ್ತೇನು?—ಕುರುವಿನಮೇಲೆ ಕಟ್ಟುಗೊದ್ದ ಕಡಿಯಿತೇನು?—ಮೊಳಕೈಗೆ ಗುಂಡು ಸೂಕಿ ಹೊಕ್ಕಿತೇನು? ಇಲ್ಲ-ಸಾಕ್ಷಾತ್ ಗಾಂಪರೊಡೆಯರೇ ಅತ್ತ ಕಡೆ ಗಾಳಿ ಸಂಚಾರಕ್ಕೆ ಹೊರಟಿದ್ದರು. ಅವರನ್ನು ನೋಡುತ್ತಲೇ ಪೆನ್‌ಷನ್‌ದಾರರು ಪೆಚ್ಚಾದರು.

ಕಾವಿ ಬಣ್ಣದ ಉಲ್ಲನ್ ಸೂಟು—ರುದ್ರಾಕ್ಷಿ ನಕ್ಷೆ ಇರುವ ನೆಕ್‌ಟೈ—ಕೃಷ್ಣಾಂಜಿನದ ಬೂಡ್ಸು—ಬೆಚ್ಚೋಲೆಯ ಹ್ಯಾಟು—ಕೈಯಲ್ಲಿ ಆಸರೆಗೋಲಿನ ಬದಲು—ರೇಸ್‌ನಲ್ಲಿ ಕೂರಲು ನೆಲಕ್ಕೆ ಚುಚ್ಚಿ ಆಸನ ಊರಲು ಅನುವಾಗುವಂತಹ ಕೋಲು ಹಿಡಿದಿದ್ದರು. ದಪ್ಪ ಗಾಜು ಕನ್ನಡಕದ ಮೇಲೆ ಕೂಲಿಂಗ್ ಗ್ಲಾಸನ್ನು ಏರಿಸಿಕೊಂಡಿದ್ದರು. ಅವರ ಹಿಂದೆ ಮೌನವಾಗಿ ಮಂಕ—ಮಡೆಯ—ಮಂಡ್ಯಾಳ—ಮಡ್ಡಿ—ಇವರುಗಳು ಬರುತ್ತಿದ್ದರು. ಸ್ವಾಮಿಗಳು ನೇರವಾಗಿ ಈ ಪೆನ್‌ಶನ್ ದಾರರ ಸಭೆಯ ಕಡೆ ಬಂದರು. ಬೆನ್ನಿನಹಿಂದೆ ನೂರಾರು ಟೀಕೆಮಾಡುತ್ತಿದ್ದ ಈ ಮಂದಿ ಸಾಕ್ಷಾತ್ ಎದುರಿಗೇ ಬಂದಿದ್ದ ಗಾಂಪರೊಡೆಯರ ಹತ್ತಿರ ಬಾಯಿ ಬಿಡದೇ ಬೆದರಿದ್ದರು. ಎಲ್ಲರೂ ಮಿಕಿ ಮಿಕಿ ಕಣ್ಣು ಪಿಳುಕಿಸುತ್ತಾ ಮುದಿ ಬೆಕ್ಕಿನ ಹಾಗೆ ಗಾಂಪರೊಡೆಯರನ್ನು ನೋಡಿದರು.

"ಮಡೆಯ—ಮೊನ್ನೆ ಧ್ಯಾನದಲ್ಲಿದ್ದಾಗ ನೀನು ನಿನ್ನ ಸಂದೇಹವನ್ನು ಬಿನ್ನಯಿಸಿಕೊಂಡದ್ದು ನೆನಪುಂಟೊ ?" ಎಂದು ಧೃಢಗಾಂಪವಾಣಿಯಲ್ಲಿ ಕೇಳಿದರು.

ಹಿಂದೆ ನಿಂತ ಮಡೆಯ ಮಾತಾಡಲಿಲ್ಲ. ಅವನಿಗೆ ನಿದ್ರೆಬಂದಿತ್ತು. ಹಿಂದಿನ ರಾತ್ರಿಪೂರಾ ಗುರುಗಳ ನಿದ್ರಾ ಮಂದಿರವನ್ನು ಮುತ್ತಿದ ಗಿಣಿಗನ್ನು ಅರಿಸಿಕೊಂಡು ಗುರುಗಳಿಗೆ ನಿದ್ರೆ ಬರುವಂತೆ ಮಾಡುವುದರಲ್ಲಿ ತೊಡಗಿದ್ದರಿಂದ, ಈಗ ಅವನು ನಿಂತರೂ—ಕುಂತರೂ—ಓಡಾಡಿದರೂ ಎಡಬಿಡದೆ ನಿದ್ರೆಯಲ್ಲಿ ತೊಡಗಿದ್ದ.

"ಮಡೆಯ—ಮಲಗಿದ್ದಾನೆ ಗುರುಗಳೇ....ಎಚ್ಚರಿಸಲೇ" ಎಂದ ಮಂಕ. "ಬೇಡ ಮಂಕಾ—'ನಿದ್ರಾಭಂಗಂ—ಬಗ್ಸ್ ಜನ್ಮ ಒಫುರ್ಂ' ಎಂಬ ನನ್ನ ಉಕ್ತಿ ಯನ್ನು ಮರತೆಯಾ—ನಿನಗೇ ಮತ್ತೆ ಈ ಮಡ್ಡಿ—ಮಂಡ್ಯಾಳನಿಗೇ ಹೇಳುವೆ

ಕೇಳಿ—'ಮುದಿ ಗೂಬೆಗಳಿಗೆ ಸರ್ಕಾರ ಯಾವ ಸಹಾಯಮಾಡಿದೆ ?' ಎಂದು ಮಡೆಯ ಕೇಳಿದ್ದ. ಈ ಗುಂಪನ್ನು ನೋಡಿ ಇವರಿಗೆ ತಿಂಗಳೂ ತಿಂಗಳೂ ಪೆನ್‌ಶನ್ ರೂಪವಾಗಿ ಸಲ್ಲುತ್ತಿರುವ ಧನಸಹಾಯಮಾಡುತ್ತಿರುವುದನ್ನು ನೋಡಿದರೆ ಮಡೆಯನ ಸಂದೇಹ ನಿವಾರಣೆ ಆಗಲಿಲ್ಲವೆ ?"

—ಎಂದು ಅರ್ಥಪೂರ್ಣವಾಗಿ ಅಲ್ಲಿ ನೆರೆದ ಗೃಧ್ರ ಗುಂಪನ್ನು ನೋಡಿದರು. ನಾಡಕರ್ಣಿಗೆ ನರನಾಡಿಗಳೆಲ್ಲಾ ಅಲ್ಲಾಡಿದವು—ಸುಬ್ಬಣ್ಣ ಹಲ್ಲು ಕಡಿದ—ವೆಂಕಪ್ಪಯ್ಯ ಬೇವಿನರಸ ಕುಡಿದ ಮುಖಮಾಡಿದ—ರಾಜೂನಾಯ್ಡುಗಳು ಎದ್ದು ಸರ ಸರ ಹೊರಟುಹೋದರು—ಮಾದೇವಪ್ಪ ಮೂರ್ಛೆಹೋದ.

"ಸ್ವಾಮಿ—ಗಾಂಪರೊಡೆಯರೇ ನೀವು ಲಂಡನ್ನಿಗೆ ಶಿಷ್ಯರ ಸಮೇತ ಎಂದು ತೊಲಗೋಣ ಮಾಗುತ್ತದೆ ?" ಸದ್ಯ ಈ ಪೀಡೆ ಹೋದರೆ ಸಾಕು ಎಂದೆನ್ನುವ ಗಂಟಲಲ್ಲಿ ಪ್ರಶ್ನಿಸಿದ ಗುಂಡಣ್ಣ.

"ಅದು ಎಂದು ಎನ್ನುವ ದಿನ ಗೊತ್ತಾಗಿಲ್ಲ—ಮುಠ್ಠಾಳ—ನಮ್ಮ ಪಾಸ್ ಪೋರ್ಟ್‌ಗಳು ಎಂದು ಬರುತ್ತವೆ ?"

"ಅದನ್ನು ತರಲು ಹೋಗಿದ್ದ ಮಂಕನನ್ನು ಪಾಸ್‌ಪೋರ್ಟ್ ಅಧಿಕಾರಿಗಳು ಜೈಲಿಗೆ ಕಳಿಸಿದ್ದು ಅವನನ್ನು ಬಿಡಿಸಿಕೊಂಡು ಬರಲು ಮಡೆಯನೂ ಜೈಲಿಗೆ ಹೋದದ್ದು ಮತ್ತೆ ಸ್ವಯಂ ತಾವೇ ಮುನ್ನೂರು ಹೊನ್ನು ಕೊಟ್ಟು ಬಿಡಿಸಿಕೊಂಡು ಬರಲಿಲ್ಲವೆ ?"

"ಮುಠ್ಠಾಳ—ಪಾಸ್‌ಪೋರ್ಟ್ ಎಂದು ಬರುತ್ತೆ ಎಂದರೆ ಅದನ್ನು ತಂದ ಕಥೆ ಹೇಳುತ್ತೀಯಾ—ಅದನ್ನು ಬರೆದು ಪ್ರಕಟಿಸು ಆಮೇಲೆ....ಹೇಳು ಎಂದು ಬರುತ್ತೆ"

"ಮುಂದಿನ ತಿಂಗಳು ಹನ್ನೊಂದಕ್ಕೆ—"

"ಹಾಗಾದರೆ ಹನ್ನೆರಡಕ್ಕೆ ಹೊರಡ್ತಿರಾನ್ನಿ—ಎಂದ ಸುಬ್ಬಣ್ಣ.

"ನಮ್ಮ ಸಂಸ್ಥಾನಕ್ಕೆ ಮತ್ತು ಶಿಷ್ಯ ಮಂಡಲಿಗೆ ಪರದೇಶ ಪ್ರಯಾಣದ ಯೋಗ ಬಂದಿರುವುದು ಅನೇಕ. ಕಂಟಕ—ದಮನಕ—ಸಂಕಟಕರು ಕರುಬುತ್ತಿದ್ದಾರೆ. ಇತರ ದೇಶಗಳ ಗಾಂಪರು ಸೌಹಾರ್ದ ನಿಯೋಗ ಅವಶ್ಯ ಎಂದು ನಮ್ಮ ಸಂಸ್ಥಾನಕ್ಕೆ ಮನವಿ ಮಾಡಿದರು. ದೇಶದ (ಕು) ಸಂಸ್ಕೃತಿಕ ನಿಯೋಜನಾ ಮಂಡಲಿಯ ಸಬ್ ಕಮಿಟಿಯ ಸೆಕ್ರೆಟ್ರಿಯ ಭಾವಮೈದುನನ ಸಲಹೆಮೇರೆ ನಮ್ಮ ಮಠಕ್ಕೆ ಈ ಶಿಷ್ಯವರ್ಗಕ್ಕೆ—ಹೋಗಿಬರುವ ಅವಕಾಶ ಸಿಕ್ಕಿದೆ. ಈ ನಮ್ಮ ಭೇಟಿಯಿಂದ ವಿದೇಶದಲ್ಲಿ ಗಾಂಪತನ ಎಷ್ಟರಮಟ್ಟಿಗೆ ಬೆಳೆದಿದೆ—ಅಲ್ಲಿನ ಗಾಂಪ

ಮಟ್ಟವನ್ನು ಅಳೆಯಲು—ಮತ್ತು ಈ ಗಾಂಪರ ಗುಂಪಿನ ಪರಸ್ಪರ ಮೈತ್ರಿ—ಸೌಹಾರ್ದ ಸಂಬಂಧದಮೇಲೆ ಒಂದು ದೀರ್ಘವಾದ ಥೀಸೀಸ್ ಬರೆಯುವುದು ಅತ್ಯವಶ್ಯಕವಾಗಿದೆ— ಆದ್ದರಿಂದ ನಾವು ನಮ್ಮ ಶಿಷ್ಯಮಂಡಲಿ ಕೂಡಿ ಹೊರಟಿದ್ದೇವೆ. ಒಂದೇ ಜಾಗ ಖಾಲಿ ಇದೆ ಯಾರಾದರೂ ಬರುತ್ತೀರಾ ?...." ಎಂದು ಗಾಂಪರೊಡೆಯರು ಕೇಳಿದಾಗ ಅಯ್ಯೊ ಎಂಥಾ ಛಾನ್ಸು ಎಂದು ಎಲ್ಲರೂ ಬಾಯಿಬಿಟ್ಟರು. ಸುಬ್ಬಣ್ಣ "ನಾನು ಬರಲೆ?" ಎಂದ.

"ಮುದಿ ಕಿರುಬ ಲಂಡನ್ ಜೂನಲ್ಲುಂಟು" ಎಂದ ಮಡೆಯ ಕನಸಿನಲ್ಲೋ ಎಂಬಂತೆ.

"ನಾನು?"—ಎಂಬಂತೆ ಗುಂಡಯ್ಯ ನೋಡಿದ.

"ಲಂಡನ್ನಿನಲ್ಲಿ ಹೆಣ ಸುಡುವುದು ಕಷ್ಟ—ಬರೀ ಹೂಳುವುದು ನಿಮ್ಮ ಪದ್ಧತಿಯಲ್ಲವೆ"?—ಎಂದ ಮಂಕ. ನಾಡಕರ್ಣಿ 'ನಾನು ಬರೋದಿಲ್ಲ' ಎಂದು ಹೇಳೇಬಿಟ್ಟ. ಕಡೆಗೆ ಮಹದೇವಪ್ಪನವರನ್ನು ತಲೆ ಸವರಿ ಗಾಂಪರೊಡೆಯರು" ನಿಮ್ಮ ಮಗ ಮರಿಗಪ್ಪ ನಮ್ಮ ಮಠಕ್ಕೆ ಸೇರಲು ಅರ್ಜಿ ಹಾಕಿದ್ದಾನೆ—ಅವನಿಗೇ ಅವಕಾಶ ಕೊಡುವೆ—ಅವನಿಗಿಂತ ಗಾಂಪತನದಲ್ಲಿ ನೀವು ಹೆಚ್ಚಿದ್ದರೂ—ವಯಸ್ಸು ಆದ ನಿಮಗೆ ಆ ಲಂಡನ್ ಛಳಿ ಸಾವು ತರುತ್ತೆ—ಪರದೇಶ ಯಾತ್ರೆಯಿಂದ ಪರಲೋಕ ಯಾತ್ರೆ ಆದರೆ ನನಗೆ ನರಹತ್ಯ ಪಾಪ, ಆದ್ದರಿಂದ ನಿಮ್ಮ ಮಗನೇ ಬರಲಿ"—ಎಂದರು. ಮಹದೇವಪ್ಪ ಎದ್ದು ಹೆಗಲಮೇಲಿನ ಟೌಲು ಸೊಂಟಕ್ಕೆ ಗಾಂಪರೊಡೆಯರ ಕಾಲು ಹಿಡಿದು.

"ಸ್ವಾಮೀ—ತಾವು ನಾಳೆ ಪಾದಪೂಜೆಗೆ ನಮ್ಮ ಮನೆಗೆ ಬರಬೇಕು—ಭಿಕ್ಷೆ ಅಲ್ಲೇ ನಡೆಯಲಿ—ಮಗನಿಗೆ ಮಾರ್ಗ ತೋರಿಸಬೇಕು"—ಎಂದು ಬಿನ್ನಯಿಸಿದ. ಗಾಂಪರೊಡೆಯರು ಶಿಷ್ಯರತ್ತ ತಿರುಗಿ ನಸನಕ್ಕು "ತಥಾಸ್ತು ಗಾಂಪದೇವೇಛ್ಛೆ" ಎಂದು ಮಠಕ್ಕೆ ತೆರಳಿದರು. ಹಿಂದೆಯೇ ಮಹದೇವಪ್ಪ ಹೋದ.

ನಾಡಕರ್ಣಿ—ಸುಬ್ಬಣ್ಣ—ಗುಂಡಯ್ಯ—ವೆಂಕಪ್ಪಯ್ಯ ಇವರುಗಳು ಮುದಿಗೂಬೆಯಂತೆ ಗಾಂಪರೊಡೆಯರು ಹೋದಕಡೆಯೇ ನೋಡಿದರು. ಕತ್ತಲು ಕವಿಯಿತು.

—ದಾಶರಥಿ ದೀಕ್ಷಿತ್

ಅದ್ದಿಗಿಂತ ನೆರಳೇ ಚೆನ್ನು

ಮಹಾಭಾರತ ನಾಟಕದಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದಲೂ ಗೀತೆಯ ಶ್ಲೋಕಗಳನ್ನು ಗಮಕಿಸಿ ಎಲ್ಲರಮನವನ್ನು ಸೆಳೆದ ಶ್ರೀಗುರುಪ್ರಸಾದರಿಗೆ ರಾಷ್ಟ್ರಾಧ್ಯಕ್ಷರು "ಪದ್ಮಭೂಷಣ" ಪ್ರಶಸ್ತಿ ನೀಡಿದರು.

* * *

ಶ್ರೀ ಗುರುಪ್ರಸಾದರು ತಿರುಪತಿಯಲ್ಲಿ ಗೀತೆಯ ಶ್ಲೋಕಗಳನ್ನು ಹಾಡಿದಾಗ, ಅನುಭಾವಿ ಅಮೇರಿಕನೊಬ್ಬರು ಆ ಗಮಕತನವನ್ನು ಗ್ರಾಮೋಫೋನ್-ಗಾನಮುದ್ರೆ-ರೆಕಾರ್ಡಿನಲ್ಲಿ ಅಚ್ಚೊತ್ತಿ ಬಹಿರಂಗ ಪಡಿಸಿದರು.

* * *

ಕರ್ಣಾಟಕದ ಮನೆಮನೆಯಲ್ಲೂ ಗಾನಮುದ್ರೆಯನ್ನು ತಿರುಗಿ ತಿರುಗಿ ಕೇಳಿ, ಜನರು ಮನಸ್ಸಿನ ಕ್ಲೇಶ ಕಳೆದುಕೊಂಡರು.

* * *

ಇದೆಲ್ಲಾ ದಿನಪತ್ರಿಕೆಗಳಲ್ಲಿ ಪ್ರಚುರವಾದ ಮೇಲ್ಪಂಕ್ತಿಯ ಸುದ್ದಿಗಳು.

* * *

ಎಂತೆಲ್ಲಾ ಜನನಾಯಕರ ಮನೆಯಲ್ಲಿ ನಡೆವ ಎಂತೆಂಥಾ ಸಮಾರಂಭಗಳಲ್ಲೆಲ್ಲಾ ಹಾಡಲು, ಈಗ ಶ್ರೀಗುರುಪ್ರಸಾದರೇ ಖಾಯಂಗುತ್ತೇದಾರರು.

ಜನನಾಯಕರ ಪಾಳೇಗಾರನೆಂದು ಅವನನ್ನು ವರ್ಣಿಸಬಹುದು. ಅವನು ಜನನಾಯಕನಾಗಿ ಬಹಿರಂಗ ಪಟ್ಟ ಎಂದೂ ವಹಿಸಿದವನಲ್ಲ. ಆದರೂ ಯಾರು ಯಾರಾದರೂ ಜನನಾಯಕ ಪಟ್ಟ ವಹಿಸಬೇಕಾದರೆ, ಈ ಪಾಳೇಗಾರನ ಪೌರೋಹಿತ್ಯ ಬೇಕೇ ಬೇಕು. ಆತನು ಒಲಿದರೆ ಪಟ್ಟ. ಮುನಿದರೆ ಪತನ ಹೀಗಿತ್ತು ಸಂದರ್ಭ.

ಅಂತಹ ಪಾಳೇಗಾರ್ ಅದ್ದಿಯ ಮಗಳ ಮದುವೆ ಎಂದರೆ ಕೇಳಬೇಕೇ? ಏನೆಲ್ಲಾ ರಾಜಕಾರಣಿಗಳು ಚಪ್ಪರದ ಕಂಭಗಳ ಸುತ್ತ ಸುತ್ತುತ್ತಿದ್ದರು. ಬಿದಿರಿನ ಕಂಭಗಳಿಗೆ ಗುನ್ನಾಂಪಟ್ಟಿ ಅಂಟಿಸಿ ನಂತರ ಸುತ್ತುತ್ತಿದ್ದರು.

ಅಂದ ಮೇಲೆ ಸಂಜೆ ಆರತಕ್ಷತೆಗೆ ಶ್ರೀಗುರುಪ್ರಸಾದರ ಗೀತಾ ಸಂಗೀತ ಕಚೇರಿ ಏರ್ಪಾಡಾದುದು ಸಹಜ.

ಮದುವೆಯ ಸಂಜೆ ಆರತಕ್ಷತೆಗೆ ಭವಿಷ್ಯದ ಆಶೆ ಇದ್ದ ಊರಿನ ಜನರೆಲ್ಲಾ ಕಿಕ್ಕಿರಿದು ಸೇರಿದ್ದಾರೆ. "ಪದ್ಮ ಭೂಷಣ" ಪ್ರಶಸ್ತಿಪಡೆದ ಶ್ರೀಗುರುಪ್ರಸಾದರು ಗೀತಾ ಸಂಗೀತ ಹಾಡುತ್ತಿದ್ದಾರೆ.

ಮದುವೆಯ ಚಪ್ಪರದಲ್ಲೆಲ್ಲಾ ಒಂದು ಪುಟಾಣಿ ಹೆಣ್ಣುಮಗು ಓಡಾಡುತ್ತಿದೆ ಕಿಲಕಿಲ ನಗುತ್ತಿದೆ. ಬಂದವರೆಲ್ಲರೂ ಅದನ್ನು ಎತ್ತಿಕೊಂಡು ಮುದ್ದಿಡುತ್ತಾರೆ: ಸುಖಪಡುತ್ತಾರೆ. ಯಾರ ಮಗು ಎಂದು ಯಾರಿಗೂ ತಿಳಿಯದು. ಆದರೂ ಅಷ್ಟು ಆಕರ್ಷಕ ನಗು ಅದರ ಮುಖದ ಮೇಲೆ. ಓಡಾಡಿದಾಗ ಆ ಮಗು ನಡಿಗೆಯಲ್ಲಿ ಪದ್ಯ ಬರೆದಂತೆ ಕಾಣುತ್ತದೆ. ನಕ್ಕರೆ, ಬೆಳದಿಂಗಳು ಹರಡಿದಂತೆ ತೋರುತ್ತದೆ.

ಗುರುಪ್ರಸಾದರ ಗೀತಾಸಂಗೀತದಲ್ಲಿ ನಾಲ್ಕು ಶ್ಲೋಕಗಳನ್ನು ಹಾಡಿದ ಮೇಲೆ "ಪಶ್ಯಾಮಿ ದೇವಾನ್" ಹಾಡಿದಾಗ, ಸಭೆಗೆ ಸಭೆಯೇ, ಚಪ್ಪರಕ್ಕೆ ಚಪ್ಪರವೇ ಚಪ್ಪಾಳೆ ತಟ್ಟಿತು.

ನಂತರ ನಿಶ್ಶಬ್ದತೆ.

ಆಗ ಆ ಎಂಟು ವರ್ಷದ ಪುಟಾಣಿ ಹೆಣ್ಣುಮಗು ಎಲ್ಲರಿಗೂ ಕೇಳಿಸುವಂತೆ ಹೇಳಿತು. "ಅಪ್ಪಯ್ಯಾ! ಗ್ರಾಮಾಫೋನ್ ರೆಕಾರ್ಡಿನಲ್ಲಿ ಇವರು ಹಾಡಿದ್ದೇ ಚೆನ್ನು, ಈಗ ಅಷ್ಟು ಚೆನ್ನಿಲ್ಲ" ಎಂದು.

ಈ ಅಚಾತುರ್ಯದ ಮಾತನ್ನು ಕೇಳಿ ಜನ ಸ್ಥಂಭೀಭೂತರಾದರು. ಜನನಾಯಕನ ಪಾಳೇಗಾರನಾಗಬಂದು ತನ್ನ ಪುಟಾಣಿ ಹೆಣ್ಣುಮಗಳ ಕೆನ್ನೆಗೆ ಏಟು ಕೊಟ್ಟು "ಹಾಗನ್ನಬಾರದು, ನಿನಗೇನು ಗೊತ್ತು" ಎಂದು ಛೀಮಾರಿ ಹಾಕಿದರು.

* * *

ಗುರುಪ್ರಸಾದರು ಎದ್ದು ಬಂದು ಆ ಹೆಣ್ಣುಮಗಳ ಕೆಂಪೇರಿದ ಕೆನ್ನೆಯನ್ನು ಮುತ್ತಿಟ್ಟು, ತಡವರಿಸಿ ಬಹಿರಂಗವಾಗಿ ಹೇಳಿದರು "ನೀನು ಅಂದಿದ್ದು ದಿಟ, ಚಿನ್ನಾ, ದೇವರ ಸನ್ನಿಧಿಯಲ್ಲಿ ಹಾಡಿದ್ದು ಗ್ರಾಮಾಫೋನ್ ರೆಕಾರ್ಡಿನಲ್ಲಿ ಮುದ್ರಿತವಾಗಿದೆ. ಈಗ ನರಮನುಷ್ಯರ ಎದುರಿಗೆ ಹಾಡುತ್ತಿದ್ದೇನೆ, ಆಗಿನ ಸೊಬಗು ಈಗ ಹೇಗೆ ಬಂದೀತು."

ಮಗುವಿಗೆ ತಿಳಿದದ್ದು ಮಹಾಜನಿಗೆ ಹೇಗೆ ತಿಳಿಯಲಾದೀತು. ನಿನ್ನ ನಿಷ್ಕಲ್ಮಷ ಮನಸ್ಸಿಗೆ ಕಂಡಿದ್ದು, ಕಲುಷಿತ ಮನಸ್ಸಿನ ಮನುಜನಿಗೆ ಅರ್ಥವಾಗಲ್ಲ ಎಂದೆಲ್ಲಾ ಅಂದಾಗ ಕಣ್ಣು ಹಸಿಗೂಡಿತ್ತು.

* * *

ಜನನಾಯಕರ ಪಾಳೇಗಾರ, ಆ, ಆದ್ಮಿ.

ಅವನ ನೆರಳಿನಂತಿರುವ ಗೀತಾ ಸಂಗೀತಗಾರ ಮತ್ತು ಪುಟಾಣಿ ಹೆಣ್ಣುಮಗಳು ಆದ್ಮಿ ಚೆನ್ನೋ? ನೆರಳೇ ಚೆನ್ನೋ?

ನಗು ಬರುತ್ತೇ ಅಲ್ಲವೇ? ಬರಬೇಕು! ಹೌದೇ!

—ಪಾಪಿ,

ನವ್ಯ ಓದಿಸಿದ್ದು

"ಇವತ್ತಾದರೂ ಕಚೇರಿಯಿಂದ ಬರೋವಾಗ ಮರೀಬೇಡೀ ಅಂದ್ರೆ :

"ಏನನ್ನೇ ಮರೀದೇ ಇರೋದು ?"

"ನೋಡಿ ಅಂದ್ರೇ ಈಗಲೇ ಮರೆತುಬಿಟ್ಟರಲ್ಲ ! ಮಜ್ಜಿಗೆ ಅನ್ನ ಬಡಿಸೋವಾಗಲೇ ಹೇಳಿದೆ. ಉಂಡು ಕೈ ತೊಳೆದುಕೊಂಡು ಒಟ್ಟೆಹಾಕಿಕೊಳ್ಳುವ ಹೊತ್ತಿಗೆ ಮರೆತುಬಿಟ್ಟದ್ದೀರಲ್ಲ್ರೀ !"

"ಅದು ಏನು ಅಂತ ಇನ್ನೂ ಜ್ಞಾಪಿಸಿಲ್ಲವಲ್ಲೇ ? ಬಸ್ಸು ಬಂದು ಬಿಡುತ್ತೆ !"

"ಅದೇ ಅಂದ್ರೆ ! ನಮ್ಮ ತುಳಸಮ್ಮನ ಮಗಳ ಮದುವೆ ನಾಡಿದ್ದು. ಓದಿಸುಕ್ಕೆ ಅಂತ ಏನಾದರೂ ನಾಜೂಕಾದ ಉಡುಗೊರೆ ಕೊಂಡುಕೊಂಡು ಬನ್ನಿ ಅಂದ್ರೇ ! ಮೂರು ದಿನದಿಂದ ಮರೀತಿದೀರ್ರೀ ! ಇವತ್ತೂ ಮರೆತರೆ ನಾನು ಕೆಟ್ಟೆ "

"ಇಲ್ಲಾ ಕಣೆ ಇವತ್ತು ಮರೆಯುಲ್ಲ. ಶಾಶ್ವತವಾಗಿ ಜ್ಞಾಪಕ ಇರೋ ಅಂತಹ ಉಡುಗೊರೇನ ಕೊಂಡು ತರ್ತೀನಿ, ಮರೀದೇ ಇರೋಹಾಗೆ ನಶ್ಯದ ಡಬ್ಬೀನ ಷರಾಯಿ ಜೇಬಲ್ಲಿ ಇಟ್ಕೊಕೋತೀನಿ. ಮೂಗು ಮುಲುಗುಟ್ಟದಾಗ ಅಂಗಿ ಜೇಬಿಗೆ ಕೈ ಹಾಕಿದಾಗೆಲ್ಲಾ ಇದರ ಜ್ಞಾಪಕ ಬಂದೇ ಬರುತ್ತೆ. ತಿರುಗಿ ಮರೀದೆ ಷರಾಯಿ ಜೇಬಿಗೇ ನಶ್ಯದ ಡಬ್ಬೀನ ಸೇರಿಸ್ತೀನಿ."

ಮನೆಯ ವರಾಂಡಾದಲ್ಲಿ ಈ ಸಂಭಾಷಣೆ ನಡೆದಾಗ ೧೮–೪೦. ಷಹರಿನ ೧೦–೨೦ರ ಆಫೀಸ್ ಬಸ್ಸು ಬಂದು ನಿಂತಿತು. ರಸ್ತೆಯಲ್ಲಿ ರಾಯರು ಬಸ್ಸು ಹತ್ತಿದರು. ಇದೆಲ್ಲವೂ ನನಗೆ ಚೆನ್ನಾಗಿ ಗೊತ್ತು. ಯಾಕೆ ಅಂದರೆ ನಾನೇ ರಾಯರು. ಕತೆ ಬರೆಯೋ ಹಾಗೆ ಬರೆಯೋಣ ಅಂತ ಶುರು ಮಾಡಿದೆ. ಯಾಕೋ ಮಾತುಗಳು ಮುಗ್ಗರಿಸಿತು. ಆದಕ್ಕೇ ನಡೆದಿದ್ದನ್ನು ಹಾಗೇ ಬರೆಯುತ್ತೇನೆ.

ಆ ಮಧ್ಯಾಹ್ನ ೨ ಗಂಟೆ ತನಕ ೧೪ ಸರ್ತಿ ನಂತರ ಐದೂವರೆ ತನಕ ೧೮ ಸರ್ತಿ ನಶ್ಯದ ಡಬ್ಬೀನ ಮರೀದೇ ಅಂಗಿ ಜೇಬಿನಲ್ಲಿಡದೆ ಪ್ರತಿ ಸರ್ತಿಯೂ ಷರಾಯಿ ಜೇಬಿನಲ್ಲಿಟ್ಟೆ. ಕಚೇರಿಯಿಂದ ಹಿಂತಿರುಗುವಾಗಕೂಡ ಮರಿಯಲೇ ಇಲ್ಲ

ಆದಕಾರಣ ಮನೆಗೆ ಹೋಗುವುದಕ್ಕಿಂತ ಮುಂಚೆ, ಹೊಸಾ ಅಂಗಡೀ ಬೀದೀಗೆ ಹೋದೆ. ನಮ್ಮೂರಿನಲ್ಲಿ ಹೊಸಾ ಅಂಗಡಿ ಬೀದಿ ಒಂದಿದೆ ಬೀದಿಯೇನೋ ಹಳೇದೇನೇ! ಆದರೆ ಎರಡೂ ಪಕ್ಕದಲ್ಲಿರುವ ಅಂಗಡಿಗಳೆಲ್ಲವೂ ಈಗ ಸಿಂಧೀ ನಿರಾಶ್ರಿತ ಸೋದರರದಾಗಿದೆ. ಒಂದು ಕಾಲದಲ್ಲಿ ಅಚ್ಚ ಕನ್ನಡದಲ್ಲಿ ಆ ರಸ್ತೆಯಲ್ಲಿ ಏನನ್ನು ಬೇಕಾದರೂ ವ್ಯಾಪಾರ ಮಾಡಬಹುದಾಗಿತ್ತು. ಈಗ ಆ ರಸ್ತೆಯಲ್ಲಿ ಕನ್ನಡ ಮಾತಾಡಿದರೆ ಕ್ಯಾ ಬೋಲ್ತಾಯ್, ಕ್ಯಾ ಹೋನಾ, ಕ್ಯಾ ಮಾಂಗ್ತಾಯ್, ಅಂತ ಅಂಗಡಿಯವರೆಲ್ಲಾ ಕ್ಯಾ ಕರಿಸ್ತಾರೆ. ಆದರೆ ಅಂಗಡಿಗಳಲ್ಲಿ ಏನೆಲ್ಲಾ ನಯ ವಿನಯ ಅಂತೀರಿ. ಮಾರೋರೆಲ್ಲಾ ಎಷ್ಟು ಚೆನ್ನಾಗಿ ಉಡುಪು ಧರಿಸಿಕೊಂಡು ನಿಂತಿರ್ತಾರೆ ಅಂತೀರಿ ನಮ್ಮ ಕಾಲದಲ್ಲಿ ವ್ಯಾಪಾರ ಮಾಡ್ತಾ ಇದ್ದರಲ್ಲ: ಮಣುಕಿನ ಜುಬ್ಬ ಮಂಡಿ ಮೇಲಿನ ಕಚ್ಚೆ ಪಂಚೆ, ರಾಗಡಿಯಂತಹ ಪಿಳ್ಳಂ ಜುಟ್ಟಿನ ಗಂಟು. 'ಜ ದಿನದ ಹೊರವಾದ ಗಡ್ಡ ಮೀಶೆ ನಕ್ಕರೆ ಮೂರು ಹಲ್ಲುನಾಪತ್ತೆ. ನಕ್ಕಾಗ ಡೊಳ್ಳಿನ ಮೇಲೆ ಕಿಲ ಕಿಲ' ಅಂತ ನಗೆಯಲೆ ಮೂಡುತ್ತಿತ್ತಲ್ಲಾ. ಅದೊಂದೂ ಇಲ್ಲ ಈಗ.

ಘಣಕ್ ಪುಣಕ್ ಅಂತ ಥಂಗುತ್ತಾ ನಡೆಯುವ ಈಗಿನ ವ್ಯಾಪಾರಸ್ಥರು,- ನಿಮಗೆ ಏನು ಬೇಕು ಅಂತ ಕೇಳೋದೇ ಇಲ್ಲ. ಇಂತಿಂಥಾ ಸಾಮಾನೆಲ್ಲಾ ನೇರವಾಗಿ ಜರ್ಮನಿ ಇಂದ ತಂದಿದ್ದೇವೆ, ಬಲು ಅಗ್ಗದ ಬೆಲೆಯಲ್ಲಿ ಆಮದು ಸುಂಕ ಬೀಳಲಿಲ್ಲ ಆದಕ್ಕೇ ಬಲು ಅಗ್ಗ. ಒಂದು ಸಾರಿ ನೋಡಿ. ಕೊಳ್ಳದೇ ಇದ್ದರೆ ಬೇಡ. ನಿಮಗೆ ಬೇಕಾದಾಗ ಇಲ್ಲಿದೆ ಅಂತಹಾ ಪರಮಾಯಿಷಿ ವಸ್ತು ಅಂತ ನಿಮಗೆ ಜ್ಞಾಪಕಬಂದರೆ ಸಾಕು. ಎಂದೆಲ್ಲಾ ನಮ್ಮ ಮುಂದೆ ಅಂದ ಚೆಂದದ, ಮುಟ್ಟಿದರೆ ಎಲ್ಲಿ ಬಾಡುತ್ತೋ ಅನ್ನುವಂತಿರುವ ಪರಮಾಯಿಷಿ ಸಾಮಾನುಗಳನ್ನು ಇಡುತ್ತಾರೆ.

ಇಂತಹ ಹೊಸ ಅಂಗಡಿಗಳಲ್ಲಿ ವಿಷನ್ ಮಲ್ಲನ ಅಂಗಡಿ ಬಲು ನವ್ಯ. ಎಲ್ಲೂ ಸಿಗದೇ ಇರುವ ವಸ್ತುಗಳು ಅಲ್ಲಿದ್ದೇ ಇರುತ್ತವೆ. ಅಲ್ಲಿಗೆ ಹೋದೆ, ತುಳಸಮ್ಮನ ಮಗಳ ಮದುವೆಗೆ ಉಡುಗೊರೆ ಕೊಂಡುಕೊಳ್ಳಲು. ತುಳಸಮ್ಮನ ಗಂಡ ನನ್ನ ಕೈ ಕೆಳಗಿನ ಅಧಿಕಾರಿ ಆದರೂ ಆಕೆ ಮಹಿಳಾ ಸಭೇಲಿ, ನನ್ನಾಕೆಗಿಂತ ಮೇಲೆ ಕೂರುತ್ತಾಳೆ. ಅಲ್ಲಿ ಅವಳನ್ನು ಕೂರಿಸೋ ಹಾಗೆ ಮಾಡಿಕೊಳ್ಳುತ್ತಾಳೆ. ನನ್ನಾಕೆಗೆ ಅಷ್ಟು ಚೂಟಿ ಇಲ್ಲ ಆದರೂ ಮನೆಗೆ ಬಂದಮೇಲೆ ನನ್ನ ಹತ್ತಿರ ಹೇಳಿಕೊಂಡು, ಹೀಗೆಲ್ಲಾ ಅವಮಾನ ಆಯ್ತು ಅಂದ್ರೇ! ಆದರೆ ಯಾರದು ತಪ್ಪು ಎಂದು ಹೇಳುಕ್ಕೆ ಬರುಲ್ಲ ಎಂದು ಅಳುತ್ತಾಳೆ. ನನ್ನಾಕೆ ಅತ್ತಾಗ ಎಷ್ಟು ಚೆನ್ನ ಅಂತೀರಿ? ದಿವಂಗತ ಲಾರಲ್ ಅತ್ತ ಹಾಗೇ ಅಳುತ್ತಾಳೆ ಅಂದ್ರೆ. ಆಗ ನಾನು ಹಾರ್ದಿಕವಾಗ ನಗುತ್ತೇನೆ. ಈಗ ತುಳಸಮ್ಮನ ಮಗಳ ಮದುವೇಲಿ, ಎಲ್ಲರ ಕಣ್ಣಿಗೂ ಬೀಳೋ

ಅಂತಹ, ಯಾರೂ ಕಾಣದ ನೋಡದಂಥಹ ನವೀನ ಉಪಯುಕ್ತ ಉಡುಗೊರೆಯನ್ನು ನನ್ನ ಹೆಂಡತಿ ವೇದಾಶೀರ್ವಾದ ಮಾಡಿಸಿಕೊಟ್ಟರೆ, ಮದುವೆ ಚಪ್ಪರಕ್ಕೆ ಚಪ್ಪರವೆ ಬೆರಗಗೊಳ್ಳಬೇಕು ಹೀಗೆಂದು ಕೊಂಡೇ ವಿಷನ್ ಮಲ್ಲಿನ ಅಂಗಡೀಗೆ ಹೋದೆ, ಸಂಜೆ.

"ಮದುವೆ ಉಡುಗೊರೆಗಲ್ವೇ! ನೀವು ಬಂದಿರೋದು, ಬೆಳಿಗ್ಗಿನಿಂದ ೧೫-೨೦ ಜನ ಆಗಲೇ ಬಂದಿದ್ರು. ಬನ್ನಿ ಬನ್ನಿ. ಒಂದೋಂದೇ ಸಾಮಾನು ತರಿಸೋದು ನಾನು ಒಂದೊಂದು ರಕಂನಲ್ಲಿ. ಅಂದರೆ ಒಬ್ಬರು ಕೊಂಡಿದ್ದು ಇನ್ನೊಬ್ಬರು ಕೊಳ್ಳೋಹಾಗೇ ಇಲ್ಲ ಒಂದೊಂದೂ ವೈಯುಕ್ತಿಕ. ಒಂದೊಂದರಲ್ಲೂ ಕೊಟ್ಟವರ ನೆನಪು ಬರುತ್ತೆ! ಅಂತ ಹೇಳ್ತಾ ಹೇಳ್ತಾ ಗಾಜಿನ ಮೇಜಿನಮೇಲೆ ಹತ್ತಾರು ಹೊಸ ಹೊಸ ನವೀನ ವಸ್ತುಗಳನ್ನು ಪ್ರದರ್ಶಿಸಿದ.

ಮೂರು ಅಂಗುಲ ನಾಲ್ಕು ಅಂಗುಲ ಒಂದಂಗುಲ ಅಳತೆಯಿದ್ದ ಸಣ್ಣ ಮಡೀ ಪೆಟ್ಟಿಗೆ ಹಾಗಿತ್ತು ಒಂದು. ಇದೇನು ಅಂತ ನಾನು ನೋಡುತ್ತಿದ್ದಹಾಗೆ ಅವ ಅದರ ಪಕ್ಕದಲ್ಲಿದ್ದ ಒಂದು ಗುಂಡಿಯನ್ನು ಒತ್ತಿದ. ಮುಚ್ಚಳ ಹಿಂದಕ್ಕೆ ಎದ್ದು ಬಿತ್ತು ಪೆಟ್ಟಿಗೆ ಒಳಗೆ ಪುಟಾಣಿ ಬಲ್ಬೊಂದು ಬೆಳಗಿತು. ಮೂರು ಬಣ್ಣದ ಹೆಣ್ಣು ಮಕ್ಕಳ ಮೂರು ಕರವಸ್ತ್ರ ಇತ್ತು ಎಷ್ಟಪ್ಪಾ ಇದಕ್ಕೆ ಎಂದೆ. ಕೇವಲ ಎಪ್ಪತ್ತೈದು ಅಂದ. ಹ್ಹಾ ಎಂದು ಬೆಚ್ಚುಬಿದ್ದೆ ಅಲ್ಲವಯ್ಯಾ ಮದುವೆ ಹೆಣ್ಣಿಗೆ ನಮ್ಮ ದೇಶದಲ್ಲಿ ಮಡಿ ಪೆಟ್ಟಿಗೆ ತರಹಾ ಕಾಣೋ ವಸ್ತುವು ಎಷ್ಟೇ ಚಂದಾಗಿದ್ದರೂ, ಯಾರೂ ಉಡುಗೊರೆ ಕೊಡುವುದಿಲ್ಲ ಇವನ್ನ ಏನಂತ ತರಿಸಿದೆ ಎಂದೆ. ಆಗ ಅವ ಮುಗುಳ್ನಗೆ ನಕ್ಕು ಸ್ವಲ್ಪ ಕಣ್ಣಂಚನ್ನು ಎತ್ತಿದನೋ ಏನೋ ನನ್ನ ಕಡೆಗೆ ನೋಡಿದ. ಮಡಿಯಾಗಿರಬೇಕಾದವನ್ನ ಮೈಲಿಗೆಯಾಗದಂತೆ ರಕ್ಷಿಸುವ ದಿವ್ಯ ಕವಚಗಳಲ್ಲಿಂಟು ಎಂದ. ಅಂದರೆ ಏನು ಎಂದು ನಾನು ಕೇಳುವ ಮೊದಲೇ ಬೇರೊಂದು ವಸ್ತುವನ್ನು ಎದುರಿನಲ್ಲಿಟ್ಟ.

ಅದೊಂದು ಎರಡು ಅಂಗುಲ ವ್ಯಾಸವಿದ್ದ ತಿಳಿ ಗಾಜಿನ ಗುಂಡಿನಂತಿತ್ತು. ಅಚ್ಚುಕಟ್ಟಾದ ಕಪ್ಪು, ಕಲ್ಲಿನ ಮೇಲೆ ಕೂತಿತ್ತು. ಗುಂಡಿನ ಮುಂಭಾಗದಲ್ಲಿ ಎರಡು ಕೋಮಲ ಹಸ್ತಗಳು ಕಾಣಿಸುತ್ತಿದ್ದುವು. ನೋಡುತ್ತಿದ್ದೆ ಇದೇನು ವಿಚಿತ್ರವಾದ ಗಡಿಯಾರ ಎಂದು. ಆಗ ಏನು ಬಂತೋ ವಿಷನ್‌ಮಲ್ಲನಿಗೆ. ಪೋಟೋದವರು ಕಪ್ಪು ಬುರುಕಿ ಹಾಕಿಕೊಳ್ಳಲ್ಲವೇ? ಆ ತರಹ ಬುರುಕಿಯನು ನನ್ನ ತನ್ನ ತಲೆಯ ಮೇಲೆ ಹಾಕಿದ. ಏನಪ್ಪಾ! ಎಂದೆ. ಈಗ ನೋಡಿ ಸಾರ್ ಅಂದ. ನೋಡಿದೆ. ಆ ಕಾರ್ಗತ್ತಲಲ್ಲಿ ಗಾಜಿನ ಗುಂಡಿನೊಳಗೆ ಒಂದು ನವನವೀನ ರಮಣಿ ಎರಡೂ ಕೈಗಳನ್ನೆತ್ತಿ. ತಾಸು ಇಷ್ಟು ಎಂದು ತೋರಿಸುತ್ತಿದ್ದಳು. ರಾತ್ರಿ ಹೊತ್ತಿನಲ್ಲಿ ಕೂಡ ಟೈಂ ಗೊತ್ತಾಗುತ್ತೆ ಸಾರ್ ಎಂದು ಹೇಳುತ್ತಾ ಆ ಬುರುಕಿಯನ್ನು ಹೊರಕ್ಕೆ ತೆಗೆದ.

ಈ ಉಡುಗೊರೆ ನವೀನ ಪರಿಮಳಯುಕ್ತಿ ಹೌದು ಎನ್ನಿಸಿತು. ಎಷ್ಟಪ್ಪಾ ಎಂದೆ. ನೂರಾ ಇಪ್ಪತ್ತು ಎಂದ. ಹಾಗೇ ಯೋಚಿಸಿದೆ. ನವೀನ ದಂಪತಿಗಳು ರಾತ್ರಿ ಎಷ್ಟು ಗಂಟೆ ಎಷ್ಟು ಅಂತ ನೋಡಕ್ಕೆ ಏನು ಆತುರ ಇರುತ್ತೇ ಇದರಿಂದ ಏನೂ ಪ್ರಯೋಜನ ಕಾಣಬರಲಿಲ್ಲ. ನನ್ನ ಮುಖದ ಭಾವವನ್ನೇ ನೋಡಿ ವಿಷಣ್ ಮಲ್ಲನು ಬೇರೊಂದು ವಸ್ತುವನ್ನಿಟ್ಟ.

ಸುಮಾರು ಒಂದು ಅಂಗಲ ಅರ್ಧ್ಧಳತೆ ಇದ್ದ ರುದ್ರಾಕ್ಷಿಯದು. ಏಕಮುಖಿ ರುದ್ರಾಕ್ಷಿ ಹಗೂರಾದ ನವಿರಾದ ಚಿನ್ನದ ನೂಲೆಳೆಯ ಲತೆಯಂತಿದ್ದ ಸರದಿಂದ ತೂಗುಬಿದ್ದಿತ್ತು, ನುಣುಪಾದ ಕಣ್ಸೆಳೆವ ಪೆಟ್ಟಿಗೆಯ ಒಳಗೆ ನೀಲಿ ಮಖಮಲ್ಲಿನ ಮೇಲೆ.

ರುದ್ರಾಕ್ಷಿಯನ್ನ ಮದವೆ ಹುಡುಗಿಗೆ ಏನೂ ಅಂತ ಓದಿಸುವುದು ? ಎಂದು ಮನಸ್ಸಿನಲ್ಲಿ ಬಂದಾಗಲೇ ವಿಷಣ್‌ಮಲ್ಲ ಆ ರುದ್ರಾಕ್ಷಿಯನ್ನು ಸರದ ಸಮೇತ ಹೊರಕ್ಕೆ ಎತ್ತಿದ. ಪಕ್ಕದಲ್ಲಿದ್ದ ಗೊಂಬೆಯ ಕತ್ತಿಗೆ ಹಾಕಿದ. ರುದ್ರಾಕ್ಷಿಯನ್ನು ಎರಡು ಬೆರಳುಗಳಲ್ಲಿ ಮೆಲ್ಲಗೆ ಒಮ್ಮೆ ಒತ್ತಿದ. ಒಂದು ಕ್ಷಣವಾಗಿರಬಹುದು. ಮಲ್ಲಿಗೆ ವನದಲ್ಲಿದ್ದಂತೆ ಭಾಸವಾಯಿತು, ಜಾಜಿಯ ಬಳ್ಳಿಗಳೇ ಒಳಸಿ ನಿಂದಿವೆಯೋ ಎನ್ನಿಸಿತು. ಚಂಪಕದಮರ ಹೂವುಗಳನ್ನು ಹೊರಲಾರದೆ ಹೊತ್ತು ಹತ್ತಿರ ಎಲ್ಲಾದರೂ ನಿಂತಿದೆಯೋ ಎನ್ನಿಸಿತು. ಒಮ್ಮೆ ದೊಡ್ಡ ಉಸಿರೆಳೆದುಕೊಂಡೆ. ಮಂದಮಾರುತವು ಆಹ್ಲಾದಕರ ವನ ಸುಮದ ಪರಿಮಳವನ್ನು ನನ್ನ ಮುಖದ ಮೇಲಾಡಿಸಿ, ಮೂಗಿಗೆ ಮುತ್ತಿಟ್ಟು ಹೋದಂತಾಯ್ತು.

ಆಗ ವಿಷಣ್‌ಮಲ್ಲನು ರುದ್ರಾಕ್ಷಿಯನ್ನು ತೋರಿಸಿದ. ಆದರ ಮೈ ತಿಳಿ ಒಡ್ಡೆಯಾಗಿತ್ತು ಆಗ ಅವನಂದ. ಇದರೊಳಗೆ ಪರಿಮಳಯುಕ್ತಿ ಸುಗಂಧ ಮಿಶ್ರ ವನ್ನು ಹಾಕಿದೆ. ಒಮ್ಮೆ ಹಗೂರಾಗಿ ಅಮುಕಿದರೆ ಸುಗಂಧವು ರುದ್ರಾಕ್ಷಿಯ ಮೈ ಹೊರಸೂಸುತ್ತದೆ. ಒಂದೈದು ನಿಮಿಷ ವಸಂತದಲ್ಲಿ ಹೂ ದೋಟದಲ್ಲಿ ತಿಳಿಗಾಳಿ ಎಳೆಯಾಗಿ ಬೀಸಿದಂತೆ ಪರಿಮಳ ಸುತ್ತಲೂ ಪಸರುತ್ತದೆ. ಇದನ್ನು ಕತ್ತಿಗೆ ಹಾಕಿಧ ಹೆಣ್ಣನ್ನು ಕೈ ಹಿಡಿದವನೇ ಪುಣ್ಯಶಾಲಿ ಎಂದ.

ಎಷ್ಟು ? ಅಂದೆ ಕೇವಲ ೨೫ ರೂಪಾಯಿ ಅಂದ. ಇವಕ್ಕಿಂತ ಮದುವೆ ಹೆಣ್ಣಿಗೆ ನವೀನ ಉಡುಗೊರೆ ಬೇಕೇ ?

ಕೊಂಡುಕೊಂಡೆ. ಮನೆಗೆ ಹೋಗಿ ನನ್ನಾಕಿಗೆ ತೋರಿಸಿದೆ ಒಮ್ಮೆ ರುದ್ರಾಕ್ಷಿಯನ್ನು ಅಮುಕಿದೆ ಪರಿಮಳ ಪಸರಿದ್ದನ್ನು ಕಂಡು ನನ್ನಾಕಿ ಏನು ಬಂತು ಅಂದ್ರೆ, ಈ ವಯಸ್ಸಿನಲ್ಲಿ ಈ ಸೆಂಟು ಪಂಟು ಉಪಯೋಗಿಸುಕ್ಕೆ ಶುರು ಹಚ್ಚಿದ್ದೀರಿ ಎಂದು ರೇಗಿದಳು. ಹಾಗಲ್ಲ ಕಣೇ. ಹೀಗೆ ! ನಾನಲ್ಲ ಸಂಟು ಬಳಿದು

ಕೊಂಡಿರೋದು ಈ ರುದ್ರಾಕ್ಷೀನೇ ಸೆಂಟೂನೂ. ಒಮ್ಮೆ ಹಗೂರಾಗಿ ಅಮುಕಿದರೆ ಪರಿಮಳ ಪಂಚ ನಿಮಿಷ ಪಂಚ ಪ್ರಾಣಗಳನ್ನ ಉಲ್ಲಾಸಗೊಳಿಸುತ್ತೆ ಎಂದು ವಿಶದೀಕರಿಸಿದೆ.

ಆಗ ನನ್ನಾಕೆ ಮಂದಸ್ಮಿತಳಾದಳು ತುಳಸಮ್ಮನಿಗೆ ಈಗ ಸೋಲು ಎಂದು ಅವಳಿಗೂ ಅನ್ನಿಸಿತು.

ಮದುವೆ ಮನೆಗೆ ಇಬ್ಬರೂ ಹೋದೆವು. ಧಾರೆ ಆಯಿತು. ಓದಿಸುವ ಹೊತ್ತು ಬಂತು. ಮಮವೇಲಿ ಓದಿಸುತ್ತಾರೋ, ಓದಿಸುವುದಕ್ಕೋಸ್ಕರ ಮದುವೆ ಮಾಡಿಕೊಳ್ಳುತ್ತಾರೋ ಎಂದು ಅನುಮಾನ ಬರೋಹಾಗೆ ನಡೆಯಿತು, ಓದಿಸುವ ಕಾರ್ಯಕಲಾಪ.

ನಮ್ಮಾಕೆ ಪುರೋಹಿತರ ಕೈಲಿ ನವಿರು ಕಾಗದದಲ್ಲಿ ಕಟ್ಟಿದ ಬೇಕ್‌ಲೈಟ್ ಪೆಟ್ಟಿಗೆಯನ್ನಿತ್ತಳು. ಓದಿಸಿದರು ಪುರೋಹಿತರು.

ತುಳಸಮ್ಮ ಹೆಣ್ಣಿನ ಹಿಂದೆ ಸರ್ಪಗಾವಲು ಹಾಕಿ ನಿಂತಿದ್ದರು. ನನ್ನಾಕೆ ಕೊಟ್ಟ ಪೆಟ್ಟಿಗೆಯನ್ನು ಆಕೆ ಅಲ್ಲಿಯೇ ತೆರೆದಳು. ಚಿನ್ನದ ನೂಲೆಳೆಯ ಸರದಿಂದ ತೂಗಿಬಿದ್ದ ರುದ್ರಾಕ್ಷಿಯನ್ನು ತನ್ನ ಹೆಬ್ಬೆರಳ ಮೇಲೇರಿಸಿ ಇಳಿಬಿಟ್ಟಳು.

ಇದೇನು ಜಾಣತನವೋ ಕಾಣೇ! ವೈಷ್ಣವರ ಮನೇ ಮಗಳಿಗೆ ರುದ್ರಾಕ್ಷೀನೇ ಓದಿಸೋದು ಎಂದಳು. ಮದುವೆ ಚಪ್ಪರದಲ್ಲಿ ನೆರೆದಿದ್ದವರೆಲ್ಲರಿಗೂ ಕೇಳಿಸಿತು.

ಸೆಂಟ್‌ಬಾಟಲ್ ತುಳಸಮ್ಮ ಅಂತ ನನ್ನಾಕೆ ಅಂದಿದ್ದು ನನಗೂ ಕೇಳಿಸಲಿಲ್ಲ. ಬೇಗ ಎಲಡಿಕೆ ತೆಗೆದುಕೊಂಡು ತಲೆ ಬಗ್ಗಿಸಿಕೊಂಡು ನಾವಿಬ್ಬರೂ ಹಿಂತಿರುಗಿದೆವು.

— ಶಾಪಿ


ಕಾವ್ಯ ಸಂಧ್ಯ

(ಒಂದು ಪಾಳ್ಗಬ್ಬ)

ಅಪರ ದಿಗ್ಭಾಗದಿ ಕದಂಬ ನಿಂತಿದೆ
ತುಂಬುಗಂಭೀರೆ ನಿಶ್ಚಲ
(ಆ ಮರಕೆ ನಮ್ಮೂರ ಹೆಸರು ಈಚಲ)
ಅದರ ಹಿಂದೆ ಪಪ್ಪಾಯಿ ತಿರುಳಿನ ದೊಡ್ಡ ತಟ್ಟೆ
ಯಂದದ ಸೂರ ಕುಡಿದು ಕೆಂಗಣ್ಣು ಬಿಟ್ಟು
(ಅಯ್ಯೊ ಸೋಮಾರಿ ಆ 'ರ' ಕೆ ಯಾವತ್ತ ಕೊಟ್ಟು
ಸೂರ್ಯ ಎಂದೇ ನಾನು ಬರೆಯಬೇಕಾಗಿತ್ತು)
ಮುಳುಗುತಿಹ, ಬಂತು ಮುಚ್ಚಂಜೆ ಹೊತ್ತು.
ಹಗಲೆಲ್ಲ ಬಿಸಿಲಿನಲಿ ಹಾಯಾಗಿ ಮಲಗಿ ಕಾಲವ
ಕಳೆಯಬೇಕು ಆದ ಬಿಟ್ಟು
ಬಿಸಿಲಿನಲಿ (ಯಾವ ಪಾಪಕೊ) ದುಡಿದು ತಂಪು
ರಾತ್ರಿಯಲಿ ದಿಂಬಿನಲಿ ತಲೆಯನಿಟ್ಟು
ದುಡಿಯದಲೆ ಮಲಗುವನು ರೈತದಡ್ಡ
(ರಾತ್ರಿಯಲಿ ಬೆಳಕಿಲ್ಲ ಮರೆತನಾಮುಡ್ಡ)
ಇನ್ನೇನು ? ಅಕೊ ಅಕ್ಕೊ ಕೇಳುತ್ತಲಿದೆ ಪಕ್ಷಿ
　　　　　　　　ಕುಲದ ಕಲ ಕಲ ದಿವ್ಯರವ.
ಆದರಯ್ಯೋ ನಾನು ಕವಿಯಾದರೂ ನನ್ನ ಕಿವಿಗಾಗುತಿದೆ
　　　　　　　　ಶೂಲವ ಚುಚ್ಚಿದನುಭವ.
'ಹಳ್ಳ್ಯಾದ ದಂಡ್ಯಾಗ' ನಿಲುವೆನೇ ಜೌಗಿನಲಿ
　　　　　　　　ನೂರೆಂಟು ಕ್ರಿವಿ-ಕೀಟಕಾಪ್ಸರೆನ್ನ
ಮಳ್ಳ ಹೆಣ್ಣಿನ ಕಳ್ಳನೋಟವನು ಸವಿವೆನೇ
　　　　　　　　ಒದೆಗೆ ಹೆದರುವುದೆನ್ನ ಮನಸ್ಸು

ಅದೊ ಅಲ್ಲಿ ಆವರೆ ಹೊಲ ಅದರ ಕೆಲ ಬಲನಿಂತ
ತುಪಟ ಕತ್ತರಿಸಿದಾರ್ನೂರು ಟಗರಿನ ಮಂದೆ
ನುಗ್ಗಿತ್ತು ಹೊಲಕೆ ಕಾವ್ಯವ ನರಸಿ ವೈತುರಿಸಿ
ಅಲ್ಲಿ ಎಲ್ಲಿಯ ಕಾವ್ಯ ? ಇಂಗಿತ್ತು. ಇಲಿಯು ಬಿಲ ನುಂಗಿತ್ತು
ಅದನು ಆಗಸದಿ ಕ್ರೌಂಚವ್ಯೂಹ ಹಾರಿತ್ತು
ಕತ್ತಲ ದಿಗಂತದೆಡೆಗೆ
ಹೊಲದೊಳಗೆ ಮಂಜು ಬಿಳುಪಿನ ಸಾವಿರಾರು ಹೂವು
(ಮಂದಾರಕಿಂತ ಕೋವಲ ಮಲ್ಲಿಗೆಗು ಬಿಳುಪು
ವಾಸನೆಯೊ ಸೊಗಡು) ಬಳ್ಳಿಯಲೆಲ್ಲ ಹಸಿರು ಹುಳ ಕಂತೆ ಕಂತೆ
ರಂಜಿಸುವುದವರೆ ಹೊಲ ಮಾನವನ ನಾಗರೀಕತೆಯಂತೆ !
ದೊಡ್ಡ ದಿಡ್ಡೀ ಬಾಗಿಲೆಲ್ಲ ಕತ್ತಲ ನುಂಗಿ
ಮುಚ್ಚುತ್ತ ಬರುತಲಿವೆ ಸಾಲು ಸಾಲು
ಹೀಗೆಯೋ ಪದ್ಯ ಬರೆಯುತ್ತಲಿದ್ದರೆ ಎದೆಗೆ
ಒದ್ದೀರಿ ಚಾಚಿ ಕಾಲು.

—ಅ ರಾ. ಸೇ.



" ಈಗಲಾದರೂ ಹೇಳಿ! ಇನ್ನುಮೇಲೆ ಆಕಾಶವಾಣಿ
ತಿರುಗಿಸುವುದಿಲ್ಲಾಂತ !....

ರಂಗಜ್ಜಿ ಹಾಕಿದ ಮಣಿಪಟ

ಜಯನಗರದಲ್ಲಿ ೪೦-೩೦ ಸೈಟೊಂದು ಸಿಕ್ಕಿ, ಅದನ್ನು ದಕ್ಕಿಸಿಕೊಂಡು, ಒಂದು ಮನೆ ಅಂತ ಕಟ್ಟಿಸಿಕೊಂಡು ನಾವು ಸಂಸಾರ ಮಾಡುಕ್ಕೆ ಶುರುಮಾಡಿ ಆರು ತಿಂಗಳಾಗಿತ್ತು. ನಾಲ್ಕು ಜನ ಹೆಣ್ಣುಮಕ್ಕಳು ಸಾಲಾಗಿ ನಿಂತರೆ, ಒಮ್ಮೆ ಚೆನ್ನಾಗಿ ಕಾಣಿಸುತ್ತಿತ್ತು. ಕೇವಲ ಭಾವೀ ಭವಿಷ್ಯದ ಊಹೆಯ ಸಂಕಟದಿಂದ ಒಮ್ಮೆ ಹೊಟ್ಟೆ ಉರಿದುಹೋಗುತ್ತಿತ್ತು. ಆಗ ನನ್ನ ನೊಂದ ಮುಖವನ್ನು ಕಂಡಾಕೆ "ಅದರ ಯೋಚನೆ ಈಗ ಯಾಕೆ ಅಂದ್ರೆ, ದೊಡ್ಡೋಳಿಗಿನ್ನೂ ಏಳುವರ್ಷ, ಹೇಗೂ ರಂಗಜ್ಜೀಗೆ ನನ್ನ ಕಂಡರೆ ಮೊದಲಿಂದಾನೂ ಬಲು ಮಮತೆ. ಆಕೆಗೆ ಏನಿಲ್ಲ ಅಂದರೂ ಒಂದು ಲಕ್ಷದ ಹತ್ತಿರ ಹತ್ತಿರ ಇದೆ. ಆಕೆಗೆ ಮಕ್ಕಳಿಲ್ಲ. ಇದ್ದೊಬ್ಬ ತಂಗೀಗೆ, ನಾವಿಬ್ಬರೇ ಹೆಣ್ಣುಮಕ್ಕಳು ಆಸ್ಪತ್ರೆ ಕಟ್ಟಿಸಬೇಕು. ಅದಕ್ಕೆ ಧರ್ಮ ಮಾಡ್ತೀನಿ ಅಂತೇನೋ ಅಂತಾ ಇದಾಳೆ ದಿಟ. ಆದರೂ ನಮಗೂ ಒಂದ್ಹತ್ತು ಸಾವಿರ ಆದರೂ ಕೊಡಲಾರಳೇ, ಅದು ಬಂದರೆ ಇವರ ಯೋಚನೆ ಏಕೆ?" ಎಂದು ಸಮಾಧಾನಮಾಡುತ್ತಿದ್ದಳು.

*　　*　　*

ಅಂದು ಡಿಸೆಂಬರ ಮೂರನೇ ಭಾನುವಾರ. "ಲೇ, ಇವತ್ತು ಹಳೇ ಟ್ರಂಕಿನಲ್ಲಿಟ್ಟಿರೋ ಸಾಮಾನನ್ನೆಲ್ಲಾ ತೆಗೆದು ವಾರಣವಾಗಿಡೋಣ" ಅಂದೆ. ಒಚ್ಚಲಮನೆ ಅಟ್ಟದಿಂದ ಬಲು ಪ್ರಯಾಸಪಟ್ಟು ಟ್ರಂಕು ತೆಗೆದಿಳಿಸಿದೆ. ನಾಲ್ಕೂ ಹೆಣ್ಣುಮಕ್ಕಳು ಸಹಾಯಕ್ಕೆ ಸುತ್ತ ನಿಂತರು. ಟ್ರಂಕಿನ ಬಾಗಿಲಿಗೆ ಸಿಕ್ಕಿಸಿ ಸುರುಳಿ ಸುತ್ತಿದ್ದ ತಂತಿಯನ್ನು ಬಿಡಿಸಲಾಗದೆ, ಅರದಿಂದ ಹರಿಯುವ ಹೊತ್ತಿಗೆ ಅರ್ಧಗಂಟೆ ಆಯಿತು. ಬಲ ತೋಳು ಸುಸ್ತಾಗಿತ್ತು. ಬೆರಳುಗಳು ಸತ್ತೇಹೋಗಿದ್ದುವು. ನೆಟ್ಟಗೆ ಎದ್ದು ಆರಾಮ ಕುರ್ಚಿಯ ಮೇಲೆ ಕುಳಿತೆ. "ಒಂದು ಒಟ್ಟಲು ಕಾಫಿ ಮಾಡಿ ತಾ, ನಂತರ ಟ್ರಂಕಿನ ಸಾಮಾನನ್ನು ವಾರಣ ಮಾಡೋಣ" ಎಂದೆ.

ಕ್ರಿಕೆಟ್ ಆಡೋವಾಗ ಲಂಚ್ ಇಂಟರ್‌ವಲ್ ಇದ್ದಹಾಗೆ ಈ ಕಾಫಿ ಇಂಟರ್‌ವಲ್ ನಮ್ಮನೆಯಲ್ಲಿ.

ಹಿಂದಿನ ದಿವಸದ ಕೋಡುಬಳೆ ಸರ ಮುಗಿಸಿ ಕಾಫಿ ಕುಡಿದು ಆರಾಮ ಕುರ್ಚಿಯಲ್ಲೇ ಕೂತು ಕೆಲಸಕ್ಕೆ ಶುರು ಹಚ್ಚಿದೆ.

"ಕಮಲೂ ನೀನು ಟ್ರಂಕಿನ ಬಾಗಿಲು ತೆಗಿ—ಅಲ್ಲೇ ನಿಂತಿರು."

"ವಿಮಲೂ ನೀನು ಮೇಲಿರುವ ಸಾಮಾನನ್ನು ತೆಗಿ."

ಎಲ್ಲಿ ತೋರಿಸು. ಓ! ಅದು ಹಳೇ ಅಂಗಿ ಕಣೇ! ನಾನು ಕಾಲೇಜಲ್ಲಿ ಕ್ರಿಕೆಟ್ ಆಡ್ತಾ ಇದ್ದಾಗ ಹಾಕ್ಕೊಳ್ಳುತ್ತಾ ಇದ್ದದ್ದು. ಏನೋ ಹಳೇ ನೆನಪಿಗೆ ಅಂತ ಇಷ್ಟು ದಿವಸಾನೂ ಇಟ್ಕೊಂಡಿದ್ದೆ. ಈಗ ತಿಪ್ಪೇಗುಂಡೀಗೇ ಲಾಯಕ್ಕು ಎಂದೆ.

"ನಮ್ಮಪ್ಪ ಹೊಲಿಸಿಕೊಟ್ಟಿದ್ದು ಅಂದ್ರೆ" ಎಂದಳಾಕೆ.

"ಹಾಗಾದರೆ ನಿನ್ನ ತಮ್ಮನಿಗೇ ಅಂಚೆ ಮೂಲಕ ರವಾನಿಸೋಣ" ಎಂದೆ.

ಆ ಹಳೇ ಬ್ಲೇಜರನ್ನು ಆಕೀನೇ ತೆಗೆದುಕೊಂಡು ಹಿತ್ತಿಲ ಕಡೆ ಗುಡ್ಡೆಹಾಕಿ ಬಂದಳು.

"ಲೀಲೂ ನೀನು ತೆಗಿ ಮೇಲೆ ಸಿಕ್ಕಿದ ಸಾಮಾನನ್ನು, ಹುಷಾರು!"

—ಹಳೇ ಸೀರೆ, ಜರತಾರೀದು. ಅಂಚೆಲ್ಲಾ ಹರಿದಿತ್ತು. ಒಡಲೆಲ್ಲಾ ತೂತು. ಇದು ಏನು ಅಂದ್ರೆ. ಖಂಡಿತ ನಂದಲ್ಲ. ನಿಮಗೆ? ಸೀರೆ? ಇದರ ಮರ್ಮ—ಏನೇನಿದೆಯೋ ನಿಮ್ಮ ಹಳೇ ಚರಿತ್ರೇಲಿ, ಕಾಲೇಜಲ್ಲೆಲ್ಲಾ ಕುಣಿದು ಕುಪ್ಪಳಿಸಿದೋರು ನೀವು" ಎಂದು ಹೇಳುತ್ತಾ ಅಳುಕ್ಕೇ ಶುರುಮಾಡಿದಳು.

ನಾನೂ ನೋಡಿದೆ. ಆ ಕರಿ ಬೂಟಾ ಹೂವಿನ ಹಳೇ ಪೀತಾಂಬರಾನ. "ಇದನ್ನು ಯಾರಾದರೂ ಹುಡುಗೀರೂ ಉಟ್ಕೊಳ್ಳುತಾರೇನೇ, ನಿನ್ನ ಅನುಮಾನ ಆಧಾರವಿಲ್ಲದ್ದು. ಆದರೂ, ಇದು ಯಾವುದು, ಇದು ಯಾಕೆ ಇಲ್ಲಿಗೆ ಬಂತು, ಒಂದೂ ನೆನಪಾಗುತ್ತಿಲ್ಲವಲ್ಲ. ನಿಮ್ಮ ತಾಯಿ ಗೀಯಿ ಸೀರೆ ಇರಬಹುದೇನೇ" ಎಂದು ನಾನೇ ದಬಾಯಿಸಿದೆ.

"ನಮ್ಮಮ್ಮ ಇಂಥಾದ್ದನ್ನು ಉಡುಕ್ಕೆ ಹುಚ್ಚೀನೂ ಅಲ್ಲ" ಎಂದಳು.

"ನಿಮ್ಮಮ್ಮನಿಗೆ ಬೇಡವಾದದ್ದನ್ನ ಇನ್ನಾರೇ ಉಡೋರು?" ಎಂದೆ

ಆಗ ಮೂರನೇ ಶಾಲಿ ಅಂದಳು "ಅಮ್ಮ! ನಿನ್ನೆ ನಮ್ಮ ಸ್ಕೂಲಿನಲ್ಲಿ ನಾಟಕ ಆಡಿದಾಗ ಇದ್ದೇ ತರಹಾ ಸೀರೇನ ಉಟ್ಕೊಂಡಿದ್ದರಮ್ಮ, ನಮ್ಮ ಮಾಡಮ್ಮ, ಮಂಡೋದರಿ ಪಾರ್ಟ್ ಮಾಡೋವಾಗ. ಬಲು ಚೆನ್ನಾಗಿ ಕಾಣ್ತಾ ಇದ್ದರಮ್ಮ"

ಆಗ ನನಗೆ ನೆನಪು ಮರುಕಳಿಸಿತು. ಕಾಲೇಜ್ ಡೇನಲ್ಲಿ ನಾಟಕ ಆಡಿದಾಗ, ನಾನೇ ರಾಣಿ ಪಾರ್ಟುಹಾಕಿದ್ದು. ಬಲು ಚೆನ್ನಾಗಿ ಆಡಿದೆ ಅಂತ ಮೆಚ್ಚಿ ರಾಜಾ

ಪಾರ್ಟ್ ಹಾಕಿದ್ದ ಪುಟ್ರಂಗು ತನ್ನ ಮನೆಯಿಂದ ತಂದಿದ್ದ ತನ್ನ ಅಜ್ಜಿಯ ಮದುವೆ ಪೀತಾಂಬರಾನ ನನಗೇ ಬಹುಮಾನ ಕೊಟ್ಟಿದ್ದ. ಅದಕ್ಕೆ ಒಂದು ಬೆಳ್ಳಿ ಕಪ್ಪೂ ಕೊಟ್ಟಿದ್ದರು. ಆ ಕಪ್ಪನ್ನ ಎಂದೋ ಮಾರಿಕೊಂಡಿದ್ದೆ. ಈ ಸೀರೇಗೆ ಗಿರಾಕಿ ಇಲ್ಲದೆ ಹಾಗೇ ಇಟ್ಟಿದ್ದೆ—ಎಲ್ಲವನ್ನೂ ಹೇಳಿದೆ. ಲೀಲಾ ಅಂದಳು, ಈಗ ಉಟ್ಟು ಕೋಪ್ಪ ನೋಡೋಣ ಹೇಗಿರುತ್ತೆ ಅಂತ. ಈಕೆ ಅಂದಳು, ನಾಚಿಕೆಯಾಗುಲ್ವೇಂದ್ರೆ ಅಂತ. ನಾನೇನೋ ಪಂಚೆ ಮೇಲೆ ಉಟ್ಟುಕೊಂಡೆ. ಪಾರ್ಸಿ ಮುಸುಕು ಹಾಕಿ ಕೊಂಡೆ. ಒನ್ಕ್ಮೆ ಬಳುಕಿದೆ, ಸೊಂಟ ಹಿಡಿದುಕೊಂಡ್ತು. ಸುಧಾರಿಸಿ ಕೂತು ಕೊಳ್ಳೋತನಕಾನೂ ಮಕ್ಕಳ ಜತೆಗೆ ಇವಳೂ ಸೇರಿಕೊಂಡು ಕೇಕೇ ಹಾಕ್ಕೊಂಡು ನಕ್ಕರು.

"ಎಸೆಯೇ ಇದನ್ನ" ಎಂದೆ. "ಬೇಡ ಅಂದರೆ ಇರ್ಲಿ" ಎಂದಳು. ಉಹ್ಹೂಂ ಎಂದು ಕೂಗಿದೆ. ವಿಮಲ ತೆಗೆದುಕೊಂಡು ಹೋಗಿ ಹಿತ್ತಲ ಕಡೆ ಗುಡ್ಡೇಗೆ ಇದನ್ನು ಸೇರಿಸಿದಳು.

ಕಮಲ ನನ್ನದು ಸರ್ದಿ ಎಂದಳು. ತೆಗೆದಳು. ಹಳದಿ ಬಣ್ಣಕ್ಕೆ ತಿರುಗಿದ್ದ ಹಳೇ ಫೋಟೋ ಅದು. ನಮ್ಮ ಮದುವೆ ಫೋಟೋ ಕುರ್ಚಿಯ ಮೇಲೆ ಕೂತಿದ್ದೇನೆ, ಪಂಚಗಚ್ಚೆ ಪಂಚೆ ಉಟ್ಟು ಟೈ ಇಲ್ಲದ ಷರ್ಟು. ಮದುವೆ ಅಂಗಿ. ಆರು ಗುಂಡಿ ಇದ್ದ ಓಪನ್ ಕಾಲರ್ ಅಂಗಿ. ಹಾಸನದ ಟೋಪಿ ತಲೆ ಮೇಲೆ. ಈ ಚೆಂದಕ್ಕೆ ಕಿರುಮೀಸೆ. ಪಾಪಾಸಿನಲ್ಲಿ ಏಟು ತಿಂದಂತಹ ಪಾಪಾಸಿನ ಹಾಗೇ ಇದ್ದ ಮುಖ. ಕುರ್ಚಿಯ ಬಲಗಡೆ ಒಂದು ಹೆಣ್ಣಿನ ಪಟ್ಟದ ಬೊಂಬೆ ಕುರ್ಚಿಯ ಮೇಲೆ ತನ್ನ ಎಡಗೈ ಹಿಡಿಯನ್ನು ಆಡಿಸಿದ್ದಾಳೆ. ಚಳತೊಂಬು, ವಂಕಿ, ಬಾವಲಿ ಇಟ್ಟ ಎಳೇ ಹುಡುಗಿ.

"ಗುಡ್ಡೆ ಜತೇಗೆ ಸೇರಿಸು" ಎಂದೆ.

"ಬೇಡ ಇರಲಿ—ನಾನಿಟ್ಟುಕೋತೀನಿ" ಎಂದಳು ಕಮಲಾ.

"ಖಂಡಿತಾ ಬೇಡ" ಅಂದೆ. ಆಕೇನೆ ಹಿತ್ತಲ ಗುಡ್ಡೇಗೆ ಸೇರಿಸಿದಳು.

ಶಾಲಿ ನಾಲ್ಕನೇ ವಸ್ತುವನ್ನು ಹೊರತೆಗೆದಳು—ಮುರುಕಲು ಸ್ಲೇಟು "ಇದ್ಯಾವುದು? ಇಲ್ಲಿಗೆ ಹೇಗೆ ಬಂತು? ಎಸೀತೀನಿ ಅಂದರೆ ಹಿತ್ತಲಕಡೆ ಗುಡ್ಡೇಗೆ" ಎಂದಳು ನನ್ನಾಕೆ. ನಾನು ಸುಮ್ಮನೆ ಆರಾಮ ಕುರ್ಚಿಯಮೇಲೆ ಕಣ್ಣು ಮುಚ್ಚಿ ಕೊಂಡೆ. ಆಕೆ ಎಸೆದುಬರಲು ಹೋದಳು.

ಮೂರು ವರ್ಷದ ತಬ್ಬಲಿ ಹುಡುಗನಿಗೆ ಆ ಸ್ಲೇಟಿನ ಮೇಲೆ ಅಕ್ಷರಾಭ್ಯಾಸ ಮಾಡಿಸಿದ್ದೆ. ಹದಿನೈದು ವರ್ಷಗಳಾದಮೇಲೆ ಆ ತಬ್ಬಲಿ ತಮ್ಮನನ್ನು ಕಡೆಯ

ಯಾತ್ರೆಗೆ ಕರೆದುಕೊಂಡುಹೋಗಿ, ಬರಿಕೈಯ್ಯಲ್ಲಿ, ಬರಿ ಮನಸ್ಸಿನಿಂದ, ಒಬ್ಬನೇ ಹಿಂತಿರುಗಿದ್ದೆ. ಮನೆಗೆ ಬಂದಾಗ ಆ ಸ್ಲೇಟು ಕಣ್ಣಿಗೆ ಬಿದ್ದಿತ್ತು. ಅದೊಂದೇ ಅವನು ಬಿಟ್ಟುಹೋದ ನೆನಪು ತರುವ ವಸ್ತು. ಅದನ್ನು ಟ್ರಂಕಿಗೆ ಭಕ್ತಿಯಿಂದ ಒಲವಿನಿಂದ ಇಟ್ಟಿದ್ದೆ. ಅವನಿಗೇ ಇದ್ದಾಗ ಎಡೆಯಿಲ್ಲದ ಮನೆಯಲ್ಲಿ ಅವನೇ ಹೋದ ಮೇಲೆ ಅವನ ಮುರುಕು ಸ್ಲೇಟೇಕೆ ಎಂದೇ ಸುಮ್ಮನಿದ್ದೆ.

ಆಕೆ ಬಂದು ತಾನೇ ಐದನೇ ವಸ್ತುವನ್ನು ಹೊರತೆಗೆದಳು. ಕತ್ತೆ ಕಾಗದದ ಬೈಂಡುಹಾಕಿಸಿದ್ದ ದೊಡ್ಡ ಪುಸ್ತಕ ಹಾಡಿನ ಪುಸ್ತಕ. ಹಾಡು ಕಲಿಯುವ ಕಾಲದಲ್ಲಿ ಸಂಗೀತದ ಮಾಸ್ತರು ಬರೆದುಕೊಟ್ಟ ಹಾಡಿನ ಪುಸ್ತಕ. ಪೇಜುಪೇಜಿಗೂ ಸಂಗೀತ ಹಾಡುವಾಗ ಸ್ವರಹಾಕುವಂತೆ ಜಿರಳೆ ಮೊಟ್ಟೆಗಳು ಸಾಲುಸಾಲಾಗಿ ಅಡ್ಡಾದಿಡ್ಡಿಯಾಗಿ ಗೋರಿ ಕಟ್ಟಿಕೊಂಡು ಬಿದ್ದಿದ್ದುವು. ದರಿದ್ರವಾಸನೆ.

ಆ ಹಳೆಯ ಪುಸ್ತಕವನ್ನು ನೋಡಿದಾಗ, ಪುಸ್ತಕ ಬಿಡಿಸಿದಾಗ ಬಂದ ಆ ವಾಸನೆ ಮೂಗಿಗೆ ಹೊಡೆದಾಗ ಆಕೆ ಹಾಡುತ್ತಿದ್ದ ಹಾಡುಗಳ ಜ್ಞಾಪಕ ಬಂತು—

ಶಾಲಿ ಅಂದಳು, ಏನೋ ಕೆಟ್ಟ ನಾಥಾಪ್ಪಾ ಅಂತ

ವಿಮಲ ಓಡಿಹೋಗಿ ಒಂದು ಊದುಕಡ್ಡಿ ತಂದು ಹಚ್ಚಿಟ್ಟಳು.

ಕಮಲ ಡಿ ಡಿಟಿ ತಂದು ಸ್ಪ್ರೇ ಮಾಡಲು ಶುರು ಮಾಡಿದಳು.

ಲೀಲ ವರಾಂಡಾಕ್ಕೆ ಓಡಿದಳು.

ನಾನು ಮುಖ ಮುಚ್ಚಿಕೊಂಡೆ ಹೆಗಲ ಮೇಲಿದ್ದ ಟವಲಿನಿಂದ ಎಸೀತೀನಿ ಅಂದರೆ ಹಿತ್ತಲಕಡೆ ಗುಡ್ಡೇಗೆ ಅಂತ ಗದ್ಗದ ಸ್ವರದಿಂದ ಆಕೆ ಅಂದಳು ಆಗ ಟವಲೆತ್ತಿ ಹೇಳಿದೆ " ಖಂಡಿತ ಬೇಡಾ ! ಪಕ್ಕದ ಮನೆಯೋರು ನಮ್ಮನೇ ಮೇಲೆ ಕಲ್ಲೆಸೆಯುಕ್ಕೆ ಆರಂಭಿಸಿಯಾರು ? ದಮ್ಮಯ್ಯಾ ಅಂತೀನಿ, ಬಚ್ಚಲುಮನೆ ಒಲೆಗೆ ಹಾಕಿ ಹೆಚ್ಚು ಸೀಮೆಯೆಣ್ಣೆ ಸುರಿದು, ಬೆಂಕಿ ಹಚ್ಚಿಸಿ, ಮ್ಯಾಚು ಬಾಕ್ಸನ್ನೂ ಒಲೆಗೆ ಹಾಕಿ, ಬರುವಾಗ ಭದ್ರವಾಗಿ ಬಾಗಿಲೆಳೆದುಕೊಂಡು ಬಾ ಎಂದು ಅರಚಿದೆ.

ಕಣ್ಣು ನೋಟ ಇರಿಯುವಂತಾಗಿದ್ದರೆ ಆಕೆ ನನ್ನ ಕಡೆ ಬೀರಿದ ನೋಟ ನನ್ನ ಎದೆಯನ್ನು ನಿರಾಯಾಸವಾಗಿ ಕೋರೈಸಿ, ಆರಾಮ ಕುರ್ಚಿಯ ಬೆನ್ನನ್ನು ಭೇದಿಸಿಕೊಂಡು, ಅದರ ಹಿಂದೆ ಇದ್ದ ಎರಡು ಅಡಿ ಮಣ್ಣಿನ ಗೋಡೆಯನ್ನು ಹಾದು ಹೊರಕ್ಕೆ ಕಾಣಿಸುತ್ತಿತ್ತು. ಅಷ್ಟು ತೀಕ್ಷ್ಣವಾಗಿತ್ತು. ಆದರೆ ಎಲ್ಲರೆದುರಿಗೂ ಆಕೆ ಒಬ್ಬಳೇ, ಆ ಸನ್ನಿವೇಶದಲ್ಲಿ. ಬಚ್ಚಲುಮನೆ ಬಾಗಿಲು ತೆಗೆದಿದ್ದು ಕೇಳಿಸಿತು. ಸ್ವಲ್ಪ ಹೊತ್ತಿನನಂತರ ಆಕೆ ಧುಮು ಧುಮು ಗುಟ್ಟುತ್ತಾ ಹಿಂತಿರುಗಿ ಬಂದಳು.

ಆಗ ನವಚೈತನ್ಯ ಮೂಡಿತು ನನಗೆ. ಸರ‍್ರನೆ ಎದ್ದವೇಗಕ್ಕೆ ಆರಾಮ ಕುರ್ಚಿ ಆರ್ರ್ರೋ ಎಂದು ಕಿರುಲಿತು. ಮೇಲುಸಿರಿನಿಂದ ಬಚ್ಚಲಮನೆಗೆ ಓಡಿದೆ. ಹಾಕಿದ್ದ ಬಾಗಿಲು ತೆಗೆದು ಒಲೆ ನೋಡಿದೆ. ಬೆಂಕಿಪೊಟ್ಟಣ ಧಗ ಧಗ ಅಂತ ಆ ಕ್ಷಣ ಹೊತ್ತಿಕೊಂಡಿತ್ತು. ಅದರ ಒಗ್ಗುಲ್ಲೇ ಹಾಡಿನ ಪುಸ್ತಕ ಚಿಕೆಯಮೇಲೆ ಮಲಗಿತ್ತು. ಸಮಾಧಾನದ ಉಸಿರಾಡುತ್ತಾ ಹಿಂತಿರುಗಿದೆ. ಹೆಂಗಸರಿಗೆ ಸಹಜವಾದ ಮೋಸವನ್ನೇನಾದರೂ ಮಾಡಿ ಹಾಡಿನ ಪುಸ್ತಕವನ್ನು ಉಳಿಸಿಕೊಂಡಿದ್ದಾಳೋ ಎಂಬ ಅನುಮಾನ ಪರಿಹಾರವಾಗಿತ್ತು. ಹಿಂತಿರುಗಿ ಆರಾಮ ಕುರ್ಚಿಯಲ್ಲಿ ಆರೆ ಪರ್ಯಂಕನಾದೆ, ಸಮಾಧಾನಚಿತ್ತದಿಂದ. ಒದಗಿದ್ದ ಪೀಡೆ ಹೋಗಿತ್ತು.

ಆರನೇ ವಸ್ತುವನ್ನು ಶಾಲಿ ತೆಗೆದಳು. ಒಂದು ಅಡಿ ಉದ್ದ, ಮುಕ್ಕಾಲು ಅಡಿ ಅಗಲ ಇದ್ದ, ಕಟ್ಟು ಹಾಕಿಸಿದ ಮಣಿಪಟ ಅದು. ಶ್ರೀ ಚಕ್ರದ ರೀತಿ ರಂಗೋಲಿ ಹಾಕಿದ್ದನ್ನು ನೀವು ನೋಡಿರಲಾರಿರಿ. ಆದರೆ ಆ ಮಣಿಯ ಪಟ ಶ್ರೀ ಚಕ್ರದ ರೀತಿಯಲ್ಲಿ ಸೊಣ್ಪೈಸರಿದೆ ಕಾರ್ಡುಬೋರ್ಡಿನಮೇಲೆ, ಬಣ್ಣ ಬಣ್ಣದ ಪುಟಾಣಿ ಮಣಿಗಳಿಂದ ರಚಿಸಲ್ಪಟ್ಟಿತ್ತು. ಕೆಳಗೆ "ರಂಗಿ" ಅಂತ ಚಚ್ಚೌಕನೇ ಅಕ್ಷರಗಳಲ್ಲಿ, ನಿರ್ಮಾತೃ ಕಲಾವತಿಯ ಸಹಿ ಇತ್ತು.

"ಅಸಂಯ್ಯ ನೋಡುಕ್ಕೆ" ಅಂದಳು ನನ್ನಾಕೆ.

"ಹೆದರಿಕೆ ಆಗುತ್ತಪ್ಪ ನೋಡುಕ್ಕೆ" ಅಂದಳು ವಿಮಲಾ

"ರಂಗೋಲಿ ಹಾಕಿದ ಹಾಗಿದೆಯಲ್ಲಪ್ಪಾ ಕಾಗದದಮೇಲೆ, ಎಷ್ಟು ಚೆನ್ನ ಇದರರ್ಥ ಏನಪ್ಪಾ" ಎಂದಳು ಕಮಲ.

"ಅರ್ಥ ಏನು ಬಂತು! ಯಾರೋ ಹೇಳಿಕೊಟ್ಟಿದ್ದನ್ನು ಯಾವುದೋ ಅರಿಯದ ಹುಡುಗಿ ಮಣಿಪಟ ಹಾಕಿದ್ದಾಳೆ—ಒತ್ತಲಕಡೆ ಗುಡ್ಡೇಗೆ ಎಸಿಯೋದೆ ಸರಿ!" ಎಂದಳು ಲೀಲಾ.

"ಎಸಿಯೋದು ಬೇಡಪ್ಪಾ ನಂಗೆ ಕೊಡಿ. ಈ ಪಟದಮೇಲೆ ನಾನು ಬಾಲ ಮಿತ್ರ ಇಟ್ಟುಕೊಂಡು ಓದಲು ಚೆನ್ನ" ಎಂದಳು ಶಾಲಿ.

ಆಗ ನಾನು ಹೇಳಿದೆ. ಈ ಮಣಿಪಟದಲ್ಲಿ ಹಾಕಿರುವ ವಿಷಯ ತಾಂತ್ರಿಕದ್ದು. ಶತ್ರುವಾಗಿ ಒಲುಮೆ ಒಲಿಸಿಕೊಳ್ಳುವ ಮಾರ್ಗ, ಎದುರುಬಿದ್ದು ದೇವರನ್ನು ಬೈದು ಆವನ ದೃಷ್ಟಿಯನ್ನು ನಮ್ಮ ಕಡೆ ಹರಿಸಿಕೊಂಡು, ಮುಕ್ತಿ ಪಡೆವ ಹಾದಿ. ಇದೊಂದೂ ಈಗ ನಿಮಗೆ ಅರ್ಥವಾಗುಲ್ಲ. ಆಗಲೂಕೂಡದು. ಆದರೆ "ರಂಗಿ" ಅಂತ ಕೆಳಗಡೆ ಸಹಿ ಇದೆಯಲ್ಲ. ಅದು ರಂಗಜ್ಜೀದು."

ಎಂದು ಎಲ್ಲರಿಗೂ, ಅಂದರೆ ಘುಮುಘುಮುಗುಟ್ಟುತ್ತಿದ್ದ ಅವಳಿಗೂ ಕೇಳಿಸು ವಂತೆ ಹೇಳಿದೆ. ಮನಸ್ಸು ಘುಮುಘುಮುಗುಟ್ಟುವಾಗ, ಕಿವಿಗೆ ತಾಕಿದರೂ ಕೇಳಿಸು ವುದಿಲ್ಲ. ಅದಕ್ಕೇ ಕೇಳಿಸುವಂತೆ ಹೇಳಿದೆ.

ಮಾರ್ದನಿ ಕೂಡಲೇ ಕೇಳಿಸಿತು.

ಈ ಮಣಿಪಟ ರಂಗಜ್ಜಿ ಹಾಕಿದ್ದೇ! ರಂಗಜ್ಜಿ ತನ್ನ ಉಯಿಲಿನಲ್ಲಿ ನಮ್ಮನ್ನು ಜ್ಞಾಪಿಸಿಕೊಂಡರೆ ನಮ್ಮ ಮಕ್ಕಳ ಬಾಳು ಚೆಂದ. ಆ ಪಟ ತನ್ನಿ ಅದನ್ನು ಮುಂಗೋಣೆಯ ಗೋಡೆಯಮೇಲೆ ಹಾಕೋಣ" ಅಂದಳು ಆಕೆ. ಆ ಮಣಿಪಟ ವನ್ನು ಮುಂಗೋಣೆಯ ಗೋಡೆಯಮೇಲೆ ನಾನೇ ಸ್ವಯಂ ಏರಿಸಿದೆ. ಏರಿಸುವಾಗ ಹೆಬ್ಬೆರಳಿಗೆ ಗುಂಡುಕಲ್ಲು ಹೊಡೆದದನ್ನು ಮರತೆ.

ಟ್ರಂಕಿನಲ್ಲಿದ್ದ ಮಿಕ್ಕ ವಸ್ತುಗಳನ್ನು ಅಲಾಯಿದಾ ನೋಡಲೇ ಇಲ್ಲ ಕಾರಣ. ಆರು ಗಂಟೆ ಹೊಡೆದಿತ್ತು ಉಳಿದಷ್ಟನ್ನೂ ಹಿತ್ತಿಲ ಕಡೆಯ ಗುಡ್ಡೆಗೆ ಸೇರಿಸಿ, ಟ್ರಂಕನ್ನು ಸ್ವಚ್ಛಗೊಳಿಸಿ, ಅಡುಗೆ ಮನೆಯ ಮೂಲೆಯಲ್ಲಿ ತೊಳೆದ ಪಾತ್ರೆಗಳ ನ್ನಿರಿಸುವ ತಾಣದಲ್ಲಿ ಇರಿಸಿದೆವು.

6-5ಕ್ಕೆ ಮನೆ ಬಿಟ್ಟೆವು ಎಲ್ಲರೂ 6-6 ಕ್ಕೆ ಮೈದಾನವನ್ನು ಸೇರಿದೆವು. 7-30ಕ್ಕೆ ಮನೆಗೆ ಬಂದೆವು. ಮೈದಾನದ ಹೋಟಲಿನಲ್ಲಿ ಅನ್ನಪೂರ್ಣಯಿತ್ತ ಬುತ್ತಿಯನ್ನು ಎಲ್ಲರೂ ತಿಂದೆವು. 8 ಕ್ಕೆ ಆಕಾಶವಾಣಿ ತಿರುಗಿಸಿದೆವು. 9 ಕ್ಕೆ ಎಲ್ಲರೂ ಮಲಗಿದೆವು.

* * *

ಡಿಸೆಂಬರ್ ನಾಲ್ಕನೇ ಭಾನುವಾರ, ಸುಪ್ರಸಿದ್ಧ ಕಶಿಗಾರ ಪುಣ್ಯಾತ್ಮ ಶ್ರೀ ನಿರಾಮಯ ದಂಪತಿ ಸಮೇತ ನಮ್ಮನೆಗೆ ಬಂದರು, ಮಕ್ಕಳೊಡನೆ ಆಡಿ ನಲಿದರು. ಆಕೆಯು ತಂದಿಟ್ಟ ತಂಬಿಟ್ಟು ತಿಂದು ತಂಪಾದರು. ಅವರಿಗೆ ಮಕ್ಕಳಿದ್ದಿಲ್ಲ. ಆದರೆ ಗಂಡನಿಗೆ ಹೆಂಡತಿ, ಹೆಂಡತಿಗೆ ಗಂಡ ಅಷ್ಟೇ ಆಗಿದ್ದರು. ಅದಕ್ಕೇ ನನ್ನ ನೋಡಿ ಅಸೂಯೆಪಟ್ಟರು. ಅಗ ತಲೆಯೆತ್ತಿ ನೋಡಿದರು ಗೋಡೆಯಮೇಲೆ ಮಣಿಪಟ ಕಂಡರು. ಎಂತಹ ಅವಲಕ್ಷಣ ಈ ಮನೆಯಲ್ಲಿ ಈ ಮಣಿಪಟ ಎಂದರು ಇಬ್ಬರೂ ಒಟ್ಟಿಗೇ.

ಅವರ ಮನಸ್ಸನ್ನು ನೋಯಿಸಲಾರದೆ, ನೋಯಿಸಲೊಲ್ಲದೆ, ನಾನೆದ್ದು ಕೆಳಗೆ ಪಕ್ಕದಲ್ಲಿದ್ದ ಪ್ರಕೃತಿಯ ಸೊಬಗಿನ ಚಿತ್ರವಿದ್ದ, ಕ್ಯಾಲೆಂಡರನ್ನು ಆ ಪಟದ ಮೇಲಕ್ಕೆ ಹಾಕಿದೆ. ನಕ್ಕು ನಕ್ಕು ಸೊಕ್ಕಿ ಸೊಕ್ಕು ಉಂಡು ಅವರ ಮನೆಗೆ ಶ್ರೀ ನಿರಾಮಯ ದಂಪತಿಗಳು ಹೊರಟುಹೋದರು.

* * *

ಜನವರಿ ಹದಿನಾಲ್ಕು. ಸಂಕ್ರಾಂತಿ ಹಬ್ಬ. ಕಚೇರಿಗೆ ರಜಾ. ಎಂಟು ಗಂಟೆಗೆ ಜಟ್ಕಾದವ ಬಾಗಿಲಲ್ಲಿ ಬೊಬ್ಬೆ ಇಟ್ಟಾಗ ಎದ್ದೆ. ಕಣ್ಣುಜ್ಜಿಕೊಂಡು ಹೊರ ಬಾಗಿಲ ತೆಗೆದೆ. ಜಟ್ಕಾದಿಂದ ಇಳಿದಳು ರಂಗಜ್ಜಿ. "ನಿಮ್ಮೂರಲ್ಲಿ, ನಿಮ್ಮ ಜಯನಗರದಲ್ಲಿ, ನಿಮ್ಮನೆ ಹುಡುಕುಕ್ಕೆ ಎರಡು ಗಂಟೆ ಆಯ್ತು! ಬೆಳಗ್ಗೆ 6 ಗಂಟೆಗೆ ರೈಲಿನಿಂದಿಳಿದು ಎರಡು ಗಂಟೆ ಒದ್ದಾಡಿದೆ, ಈ ಸಾಬಿಸಹಿತ, ನಿಮ್ಮನೆ ಪತ್ತೆ ಹಚ್ಚೋಕ್ಕೆ ಅಲ್ಲ ಮಗೂ ಮೂರು ದಿವಸದ ಹಿಂದೆ ಕಾಗದ ಹಾಕಿದ್ದೆ ಸ್ಟೇಷನ್ನಿಗೆ ಬರಬಾರದಿತ್ತೇ: ಸಂಕ್ರಾಂತಿ. ಮಕ್ಕಳ ಹಬ್ಬ, ನಿಮ್ಮನ್ನೆಲ್ಲಾ ನೋಡಿ ಹೋಗೋಣ ಅಂತ ಮುದುಕಿಯ ಮನಸ್ಸು ಎಳೆಯಿತು. ಎಲ್ಲಾ ಬಿಟ್ಟು ಎಲ್ಲರೂ ಮಕ್ಕಳೇ ಅಂತ ಅನ್ನೋಳಿಗೂ ನನ್ನ ಮಕ್ಕಳು ನೋಡೋಣ ಅಂತ ಚಪಲ ಹತ್ತಿದ್ದಕ್ಕೆ ಬಂದೆ. ಬಂದಿದಕ್ಕೆ ತಕ್ಕ ಶಿಕ್ಷೆ ಆಯಿತು" ಅಂದಳು ರಂಗಜ್ಜಿ.

"ನಿನ್ನ ಕಾಗದ ಬರಲಿಲ್ಲವಲ್ಲ ರಂಗಜ್ಜೀ" ಎಂದೆ, ಬೇಗ ಓಡಿ ಹೋಗಿ ಜಟ್ಕಾದಿಂದ ಸಾಮಾನಿಳಿಸಿ ನಾನೇ ಹೊತ್ತು ತಂದೆ, ನನ್ನ ಗಡಿಬಿಡಿಯಿಂದ ಆಕೆ ಕೂಡ ಅಡಿಗೆ ಮನೆಯಿಂದ ಬಂದಿದ್ದಳು, ಮಕ್ಕಳೆಲ್ಲಾ ಎದ್ದಿದ್ದುವು. ಅವರೆಲ್ಲರೂ ರಂಗಜ್ಜಿಯನ್ನು ಮುತ್ತಿ ಸುತ್ತುಕೊಂಡಿದ್ದರು. ಜಟ್ಕಾಸಾಬಿಗೆ ಕೇಳಿದ್ದಕ್ಕಿಂತ ಹೆಚ್ಚು ಕೊಟ್ಟು ಹಿಂತಿರುಗಿ ಬಂದು ರಂಗಜ್ಜಿಗೆ ನಮಸ್ಕಾರ ಮಾಡಿ. "ಏಳಜ್ಜೀ; ಸ್ನಾನ ಮಾಡು, ಕಾಫಿ ಕುಡಿ ನಂತರ ಮಾತುಕತೆ" ಎಂದೆ. ಆಗ ಪುಟಾಣಿಶಾಲಿ ಬಂದಳು ರಂಗಜ್ಜಿಯ ಮೇಲೆ ಚಿಮ್ಮಿದಳು. ರಂಗಜ್ಜಿ ಶಾಲಿಯನ್ನು ಎತ್ತುಕೊಂಡಿದ್ದು ನೋಡಿದರೆ ಯಾರಿಗೆ ಯಾರು ಎನ್ನಿಸಿತು.

ಆಕೆ ಸ್ನಾನ ಮಾಡಿ ಪೂಜೆ ಮಾಡಿ ಕಾಫಿ ಕುಡಿಯೋ ಹೊತ್ತಿಗೆ ಹನ್ನೊಂದಾಗಿತ್ತು. ಹೊರ ಬಾಗಿಲಬಳಿ ಬಂದು ನಿಂತಳು. ಅಂಚೆಯವ ಅವಳು ಬರೆಸಿದ ಕಾಗದಾನ ಅವಳ ಕೈಲೇ ಕೊಟ್ಟುಹೋದ, ಎಕ್ಸ್‌ಪ್ರೆಸ್ ಡಿಲಿವರಿ ಕಾಗದ, ರಜಾ ದಿನ ಕೂಡ ಬರುವ ಕಾಗದ. ಆದರೆ ಬರಬೇಕಾದ್ದು ಮೂರು ದಿನಗಳ ಹಿಂದೆ ಅಜ್ಜೀನೇ ವಿಮಲನ ಕೈಲಿ ಕಾಗದ ತಂದಕೊಟ್ಟು ಓದು ಅಂದಳು. ಆ ವೇಳೆಗೆ ಸ್ನಾನ ಮಾಡಿಕೊಂಡು ನಾನೂ ಬಂದೆ. ವಿಮಲ ಓದಿದಳು. ಆಕೆ ಬಂದು ನಿಂತಳು. ರಂಗಜ್ಜಿ ಆಕೆ, ನಾನು ಮಕ್ಕಳು ಎಲ್ಲರನ್ನೂ ನೋಡಿದಳು. ಪ್ರಸನ್ನಳಾದಳು.

"ಹೌದಲ್ಲೋ ಮಗೂ, ಮೂರು ದಿನದ ಹಿಂದೆ ತುರ್ತು ಕಾಗದ ಹಾಕಿಸಿದಾಗ ಸ್ಟೇಷನ್ನಿಗೆ ಖಂಡಿತ ಬಂದು ಮುದುಕೀನ ಕರಕೊಂಡು ಹೋಗ್ರಿ ಎಂದಿದ್ದೆ. ಅಂಚೇಲಿ ಕೂಡ ಇಷ್ಟು ವಿಳಂಬವೇ, ವರ್ಷಕ್ಕೆ ತಕ್ಕ ಹಾಗೆ ಇದೇ" ಎಂದು ಹೇಳಿ ನಕ್ಕಳು.

ಹಬ್ಬದ ಊಟ ಬಲು ಚೆನ್ನು. ಮಕ್ಕಳ ಕೂಟ ಇನ್ನೂ ಚೆನ್ನು. ಅಜ್ಜಿ ಇದ್ದರೆ ಮತ್ತೂ ಚೆನ್ನು.

ಸಂಜೆ ಆರಕ್ಕೆ ಜವಾನನೊಬ್ಬ ಬಂದ. ಆಕೆ ಬಂದು ನನ್ನನ್ನು ಎಬ್ಬಿಸಿದಳು. "ಯಾರೋ ಬಂದಿದ್ದಾರೆ ಅಂದ್ರೆ. ನಿಮಗೊಂದು ಲಕೋಟೆ ತಂದಿದ್ದಾರೆ ಅಂದ್ರೆ ರಂಗಜ್ಜಿ ಸುಖನಿದ್ರೆ ಮಾಡುತ್ತಿದ್ದಾರೆ ಅಂದ್ರೆ. ನಮ್ಮ ಹೆಣ್ಮಕ್ಕಳ ಮದುವೆ ಸಲೀಸು ಅಂದ್ರೆ" ಎಂದು ಹೇಳುತ್ತಾ ಕುಲುಕುಲು ನಗುತ್ತಾ. ಎದ್ದು ಹೋಗಿ ಒಂದ ಜವಾನನಿಂದ ನಾನು ತೆಗೆದುಕೊಂಡ ಪ್ಯಾಕೇಟು ಏನು ಅಂತೀರಿ ಹೊಸ ವರ್ಷದ ಕ್ಯಾಲೆಂಡರು. ಖಲೀಲ್ ಆಗರಬತ್ತಿ ಕ್ಯಾಲೆಂಡರು.

ಹೊಸ ಕ್ಯಾಲೆಂಡರು ಬಂದಾಗಲೇ ಅದನ್ನು ಮೊಳೆಗೆ ತೂಗೋಣ ಎಂದ್ಕ ಮುಂಕೊಠಡಿಗೆ ಬಂದೆ. ಹಳೇ ಕ್ಯಾಲೆಂಡರು ಜನವರಿ ಹದಿನಾಲ್ಕಾದರೂ ಅಲ್ಲೇ ಇತ್ತು. ಸ್ಟೂಲನ್ನು ಹತ್ತಿ ಹಳೇ ಕ್ಯಾಲೆಂಡರನ್ನು ತೆಗೆಯಬೇಕು. ಆಗ ರಂಗಜ್ಜಿ ಒಳಗಿನಿಂದ ಬಂದಳು. "ಏನು ಮಾಡ್ತೀದಿ ಮಗೂ" ಎಂದಳು. ಅವಳ ಹಿಂದೆಯೇ ಆಕೆಯೂ ಬಂದಳು.

"ಹೊಸ ಕ್ಯಾಲೆಂಡರು ಬಂತು ಅಜ್ಜೀ! ಅದನ್ನು ಹಾಕೋಣ ಅಂತ" ಅಂದೆ. ಹಳೇ ಕ್ಯಾಲೆಂಡರನ್ನು ತೆಗೆದೆ. ಬಿಸಾಕಿದೆ. "ಲೇ! ಹೊಸ ಕ್ಯಾಲೆಂಡರನ್ನು ಕೊಡೆ" ಎಂದೆ

ಗೋಡೆಮೇಲೆ ರಂಗಜ್ಜಿಯ ಮಣಿಪಟ ನಮ್ಮೆಲ್ಲರನ್ನೂ ತೀಕ್ಷ್ಣವಾಗಿ ನೋಡಿತು. ಶ್ರೀ ಚಕ್ರ, ಶ್ರೀ ಚಕ್ರದಂತೆ ದುರುಗುಟ್ಟಿತು. ಬೇಗ ಹೊಸ ಕ್ಯಾಲೆಂಡರನ್ನು ತೂಗಿಹಾಕಿ, ಇಳಿದ ದೇಶಾವರದ ನಗೆ ಹೂಡಿದೆ.

ಮಾರನೆ ದಿನ ರಂಗಜ್ಜಿ ತನ್ನ ಊರಿಗೆ ಹಿಂತಿರುಗಿದಳು ಎಷ್ಟು ಹೇಳಿದರೂ ನಮ್ಮಲ್ಲಿ ನಿಲ್ಲಲಿಲ್ಲ. ರಂಗಜ್ಜೀನ ರೈಲ್ವೆ ಸ್ಟೇಷನ್ನಿನಲ್ಲಿ ಬಿಟ್ಟು ಬಂದಾಗ ನನ್ನಾಕೆ ಏನು ಮಾಡಿದಿರಿ ಅಂದರೇ! ರಂಗಜ್ಜಿ ಮಣಿ ಪಟೀನ ಕ್ಯಾಲೆಂಡರಲ್ಲಿ ಮುಚ್ಚಿದ್ದನ್ನು ಆಕೆ ನೋಡಿದಳಲ್ರೀ! ರಂಗಜ್ಜಿ ಮನಸ್ಸನ್ನೂ ಒಡೆದುಹಾಕಿದರಲ್ರೀ! ಉಯಿಲಿನಲ್ಲಿ ಉಳಿಯೋದು ನಮಗೇನು ಎಂದು ಅಳುಕ್ಕೆ ಶುರು ಮಾಡಿದಳು.

ಈ ಬಾರಿ ಅವಳ ಕೂಡ ನಾನೂ ಅಳುದನಿ ಸೇರಿಸಿ ಅತ್ತೆ.

* * *

ಮೂರು ತಿಂಗಳಾದ ಬಳಿಕ ತಂತಿ ಬಂತು ರಂಗಜ್ಜಿ ಮುಕ್ತಿ ಪಡೆದಳು ಅಂತ. ಆಕೆಯ ಲಾಯರು ಕಳಿಸಿದ್ದ ತಂತಿ. ಮೂರು ದಿನದ ಬಳಿಕ ಲಾಯರ ಕಾಗದ ಬಂತು. "ರಂಗಜ್ಜಿ ನಮ್ಮ ಹೆಣ್ಣು ಮಕ್ಕಳಿಗೆ ತಲಾ ಹತ್ತು ಸಾವಿರದಂತೆ ನಾಲ್ವತ್ತು ಸಾವಿರ ರೂಪಾಯಿಗಳನ್ನು ಆಶೀರ್ವದಿಸಿ ಕೊಟ್ಟು ಸ್ವರ್ಗ ಸೇರಿದ್ದಳು.

ಲಾಯರ ಕಾಗದ ಓದಿ ನಾವು ಅತ್ತೆವು. ಅಂಥಹ ಉದಾರ ಹೃದಯ ಅಜ್ಜಿ ಕಣ್ಮರೆಯಾದುದಕ್ಕೆ ಅತ್ತೆವು. ಶಾಲಿ ಅಳುವನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತೆವು. ಶಾಲಿಯನ್ನು ತಬ್ಬಿಕೊಂಡೆವು-

ರಂಗಜ್ಜಿ ಸ್ವರ್ಗವನ್ನೈದಿದಳು. ಆಗ ನಾವೆಲ್ಲಾ ಅತ್ತೆವು. ಅಳುತ್ತಾ ಅಳುತ್ತಾ, ಈ ಲೋಕದ ಕಾರ್ಪಣ್ಯದಲ್ಲಿ ಕೂಡ ಸ್ವರ್ಗವನ್ನು ಕಂಡೆವು. ಹೆಣ್ಣು ಮಕ್ಕಳ ಹಿತ ಮುಂಬಾಳಿಗೆ ಈಗ ಹಣದ ಅಡಚಣೆಯಿಲ್ಲವಲ್ಲ!!

—ಪ್ರಸಾದ್



"ಹಾಳು ರಷ್ಯನ್ನರು ಸ್ವಲ್ಪ ಮುಂಚೇನೆ ಈ ರಾಕೆಟ್ ಕಂಡುಹಿಡಿದೀಬಾರದಿತ್ತೇ?.... ನಾವೂ ಬದುಕಿರೋದಿರಲ್ಲಿ ಒಂದ್ ದಫ ಚಂದ್ರಲೋಕಕ್ಕೆ ಹೋಗಿ ಬಂದುಬಿಡಭೋದಾಗಿತ್ತು!"

ತಾತ್ಯಾ ಟೋಪಿಯ ನಿರ್ಗಮನ

ಎರಡೂವರೆ ವರ್ಷಗಳ ಹಿಂದಿನಮಾತು. ಮುಗಿಲುಹಳ್ಳಿ ಝಂಝಾವಾತ ಪೀಡಿತ ಸಾಗರದಂತೆ, ಅಲ್ಲೋಲಕಲ್ಲೋಲವಾಗಿತ್ತು. ಒಂದು ಶತಮಾನದ ಹಿಂದೆ ಆರಂಭವಾದ ದೊಡ್ಡದಂಗೆ ದಿನದಿನಕ್ಕೂ ಹೆಚ್ಚುತ್ತಿತ್ತು. ಸಾವಿರಾರು ಸೇಂಗಾ ಗಾಡಿಗಳು, ನೂರಾರು ಶಾರ್ದೂಲವಿಕ್ರೀಡಿತ ಲಾರಿಗಳು, ಅಸಂಖ್ಯಾತರಾದ ಮಧು ಮತ್ತರು, ಬೀದಿಯ ಕಾಮಣ್ಣಗಳು, ಓಸೀ ಪ್ರಿಯರು, ಮಠದ ಮೇಲಿನ ಕಾಗೆಗಳು, ಬೀದಿ ನಾಯಿಗಳು, ಧೂಳು, ಹೊಗೆಗಳಿಂದ ಮುಗಿಲುಹಳ್ಳಿಯಲ್ಲಿ ಗೊಂದಲದ ಚಕ್ರವ್ಯೂಹ ಒಡ್ಡಲ್ಪಟ್ಟಿತ್ತು. ಬಿರುಬಿಸಿಲು ರಪ್ಪನೆ ರಾಚುತ್ತಿತ್ತು. ಟಾರೆಣ್ಣೆ ಕುದಿಯುತ್ತಿತ್ತು. ಅಂದು ಕರೀ ಅಮಾವಾಸ್ಯೆಯ ಮಟಮಟ ಮಧ್ಯಾಹ್ನ.

ರೈಲು, ನಿಲ್ದಾಣದಲ್ಲಿ ಸಿಳ್ಳೆಹಾಕಿತು. ಆ ತೂರ್ಯಸ್ವನವನ್ನು ಕೇಳಿ ಜನ ಭಯಗ್ರಸ್ತರಾಗಿ ಗಡಗಡ ನಡುಗಿದರು—ಆ ಲೋಕಲ್ಲಿನಲ್ಲೇ ತಾತ್ಯಾ ಟೋಪಿ ಬಂದದ್ದು. ಸ್ಟೇಷನ್ ಬಿಟ್ಟ ತಾತ್ಯಾಟೋಪಿಗೆ ಮೊದಲು ಕಣ್ಣಿಗೆ ಬಿದ್ದದ್ದು; ಅಸ್ತವ್ಯಸ್ತವಾಗಿ ಗುಟುಕುಜೀವದೊಡನೆ ಧೂಳಿಯಲ್ಲಿ ಹೊರಳುತ್ತಿದ್ದ ಮೂರು ಪ್ರಾಣಿ ವಿಶೇಷಗಳು. ಅವನು, ಅವನ್ನೆತ್ತಿಕೊಂಡು ಪೋಲೀಸ್ ಸ್ಟೇಷನ್ನಿಗೆ ಒಯ್ದು ಉಪಚರಿಸಿದ. ಆ ಮೂರು ಪ್ರಾಣಿ ವಿಶೇಷಗಳೇ—ಸತ್ಯ, ಧರ್ಮ, ನ್ಯಾಯ.

* * *

ಮುಗಿಲುಹಳ್ಳಿಯ ಇತಿಹಾಸದಲ್ಲಿ ಆಗಾಗ ಉಲ್ಲೇಖಿಸಲ್ಪಟ್ಟ ತಾತ್ಯಾಟೋಪಿ ಬಂದದ್ದು ಮೇಲ್ಕಂಡಂತೆ. ಅವನು ಬಂದ ಒಂದು ವಾರದಲ್ಲಿಯೇ ಮುಗಿಲುಹಳ್ಳಿ ಕೋರ್ಟಿನಲ್ಲಿ 2,800 ಕುಡಿತದ ಕೇಸುಗಳು, 3,600 ಟ್ರಾಫಿಕ್ ಇರೆಗ್ಯುಲಾರಿಟಿ ಕೇಸುಗಳು, 5,000 ದೊಂಬಿ ಕೇಸುಗಳು, 6,000 ಇತರೆ ಕೇಸುಗಳು ಕೋರ್ಟಿಗೆ ದಾಖಲಾದವು. ಪ್ರತಿಯೊಬ್ಬ ಅಪರಾಧಿಗೂ ಶಿಕ್ಷೆಯಾಯಿತು. ರಾಜಕಾರಿಣಿಗಳೂ, ಶ್ರೀ ಸಾಮಾನ್ಯರೂ ರೇಗಿದರು. "ಬಿಡೋ ಇವ್ನಂಥ ಪಿಟಿ........ಕ್ಕಳನ್ನು ಎಷ್ಟು ಜನ ನೋಡಿದ್ದೇನು" ಎಂದ ಗೂಗೆ ಬಸಣ್ಣ, ಮುಗಿಲುಹಳ್ಳಿಯ ಕ್ಯುಪಿಡ್ ಕ್ಯಾಂಪಿನಲ್ಲಿ ತಾತ್ಯಾ ಟೋಪಿಯ ಕೈಗೆ ಸಿಕ್ಕಿಬಿದ್ದು, ಮಾನ ಕಳೆದುಕೊಂಡು, ದಂಡ ತೆತ್ತ. "ಇನ್ನೆಷ್ಟಿನನೋ ಇವ್ನ ಹಾರಾಟ. ಈ ಜೋರೆಲ್ಲಾ ಹಸಿರ್ನೋಟು ಕಂಡ್ರೆ ಹಾರ್ಹ್ಯೋಕ್ಕತೆ" ಎಂದ ಕತ್ತೆ ಸಂಕಣ್ಣ ಹತ್ತಾರು ಹಸಿರು ನೋಟುಗಳನ್ನು ಕೋರ್ಟ

ನಲ್ಲೇ ತೆತ್ತು ತೆಪ್ಪಗಾದ. "ಹೆಯ್ ನಾನ್ಯಾಕಣ್ಣ ನಲ್ಲಬಿಡೋ ಈ ಊರು ಗೆಲ್ಲಕ್ಕೆ ಈ ಕಪಂಗಿ ಕೈಲಾಕ್ಕತೇ? ಇಂಥ ಸಾವ್ರಜನ ಪೋಲೀಸ್‌ನರು ಬಂದ್ರೂ ನಡ್ಯಲ್ಲ" ಎಂದ ಅತಿರಥ ಮಹಾರಥರೆಲ್ಲಾ ಭಂಗಿತರಾದರು. ಚೌಕಿಪೇಟೆ, ತಂಬಾಕು ಪೇಟೆ ಗಳ ಧೀರರೂ, ಬೊಂಬೈಲಾರಿ ಸರದಾರ್ಜಿಗಳೂ, ಗರಡಿ ಪೈಲ್ವಾನರೂ, ತಾತ್ಯಾ ಟೋಪಿಯ ಗದಾ ದಂಡದಿಂದ ತಲೆಯೊಡೆದುಕೊಂಡರು. "ಲಕ್ಷನಟ್ಲೆ ಲಂಚ ಕೊಡ್ತೀವಿ, ಈ ಶನಿ ಸುಮ್ನಾದ್ರೆ ಸಾಕು" ಎಂದವರೆಲ್ಲಾ ಲಂಚ ಕೊಡಲು ಹೋಗಿ ಬಂಧಿತರಾದರು.

ಆಗ ಮುಗಿಲುಹಳ್ಳಿ ತಮ್ಮಣಿಯಾಯಿತು. ಪ್ರಜಾಪ್ರಭುತ್ವದ ಪುನರುತ್ಥಾನ, ಪೋಲೀಸ್ ಆಡಳಿತದಿಂದ ಸಾಧ್ಯ ಎಂದು ಪ್ರಪಂಚಕ್ಕೆ ತಿಳಿದದ್ದು ಅವನಿಂದಲೇ.

ತಾತ್ಯಾಟೋಪಿ, ಸರ್ವಸಮಾನತೆಯಲ್ಲಿ ಶ್ರದ್ಧೆಯಿಟ್ಟವನು. ಬೊಂಬಾಯಿ ನಿಂದ ಸುಪ್ರಸಿದ್ಧ ಚಲಚ್ಚಿತ್ರ ನಿರ್ಮಾಣತಂಡವೊಂದು ಬಂದಾಗ ತಾತ್ಯಾಟೋಪಿ ಅವರ ತಂಡವನ್ನು ತಡೆದು, ಅವರ ಲಾರಿಗಳ ಮತ್ತು ಕಾರುಗಳ ಲೈಸೆನ್ಸ್ ಮತ್ತು ರೋಡ್ ಸೆಸ್ ರೆಮಿಟೆನ್ಸ್‌ಗಳು ಸರಿಯಾಗಿಲ್ಲವೆಂದು ಅವರನ್ನು ಸ್ಟೇಷನ್ನಿಗೆ ಕರೆದೊಯ್ದ. ಬೆಸ್ಟ್ ಷೋ ಆನ್ ಅರ್ತ್ ಎಂಬ ಸರ್ಕಸ್ಸಿನವರಿಗೂ ಅದೇ ಗತಿಯಾಯ್ತು. ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದ ಕೆಲವು ಕನಿಷ್ಠ ಬಿಲ್ಲೆಗಳಿಗೂ ಶಿಕ್ಷೆಯಾಯ್ತು. ಚಲಚ್ಚಿತ್ರ ನಟನಟಿಯರ ತಂಡಕ್ಕಾದ ತಡೆಯನ್ನು ಪ್ರತಿಭಟಿಸಿ ಪ್ರದರ್ಶನ ನಡೆಸಿದ ಕಾಲೇಜು ಹುಡುಗರಿಗೆ ಥರ್ಡ್ ಡಿಗ್ರಿ ಸಿಕ್ಕಿತು. ಒಂದು ದಿನ ರಾತ್ರಿದೀಪವಿಲ್ಲದೆ ಸೈಕಲ್ ಹೊಡೆದ ತಪ್ಪಿಗಾಗಿ ಅವನು ತನ್ನ ಮೇಲೇ ಕೇಸು ದಾಖಲು ಮಾಡಿದ.

ಓ ಹೋ! ಪರಮಾಶ್ಚರ್ಯ! ತಾತ್ಯಾಟೋಪಿ ಬಂದ ಒಂದು ತಿಂಗಳ ನಂತರ ಹಾಗೇ ಹಗಲಿನಲ್ಲೇ, ಧರ್ಮ ನ್ಯಾಯ ಸತ್ಯಗಳು, ಪೌರನೀತಿ ಶಿಸ್ತು ಶಾಂತಿಗಳೊಡನೆ, ಯಾರ ಹೆದರಿಕೆಯೂ ಇಲ್ಲದೆ ಊರ ಬೀದಿಗಳಲ್ಲಿ ವಾಕಿಂಗ್ ಹೊರಟವು!

ಒಂದು ದಿನ ಮುಗಿಲುಹಳ್ಳಿಯ ಅತ್ಯುನ್ನತ ಪೋಲೀಸ್ ಅಧಿಕಾರಿಗಳು ಊರಿಗೆ ಹತ್ತು ಮೈಲಿ ದೂರದಲ್ಲಿ ಓವರ್ ಲೋಡ್ ಆದ ಬಸ್ಸೊಂದನ್ನು ಹಿಡಿದಾಗ, ಡ್ರೈವರ್ "ಸಾಬ್, ಇನ್ಮ್ಯಾಲೆ ಎಂದೆಂದೂ ಹಿಂಗ್ಮಾಡಕಿಲ್ಲ ಸಾಬ್, ಇದು ಕಂಪ್ನಿ ಬಸ್ಸು ಸಾಬ್ ಕೇಸ್ ಹಾಕಿದ್ರೆ ನನ್ಕೆಲ್ಸ ಹೋಕ್ಕತೆ ಸಾಬ್. ಒಂದಫ ಬಿಟ್ಬಿಡ್ರಿ ಸಾರ್" ಎಂದು ಅವರ ಕಾಲು ಹಿಡಿದುಕೊಂಡ. ಆಗ ಕರುಣಾಶಾಲಿಗಳಾದ ಅವರು ವಾರನ್ ಮಾಡಿದೀನಿ ಈ ಬಾರಿ. ಇನೊಂದು ಸಾರಿ ಓವರ್ ಲೋಡ್ ಕಾಣ್ಸಿದ್ರೆ ತಾತ್ಯಾಟೋಪಿಗೆ ನಿನ್ನ ಹಿಡ್ಕೊಡ್ತೀನಿ" ಎಂದರು.

ಮಾನ್ಯ ಮಂತ್ರಿಗಳೊಬ್ಬರು ಮುಗಿಲು ಹಳ್ಳಿ ರಂಗಮಂಟಪವನ್ನು ಉದ್ಘಾಟಿಸಿ ನಾಟಕವನ್ನು ನೋಡುತ್ತಾ ಆನಂದಪರವಶರಾಗಿ ಸಿಗರೇಟು ತೆಗೆದು ಹೊತ್ತಿಸಲು ಹೋದಾಗ ಅವರ ಆಪ್ತ ಕಾರ್ಯದರ್ಶಿ "ಸಾರ್, ಹೊರಗೆ ಹೋಗೋಣ ಬನ್ನಿ ತಾತ್ಯಾ ಟೋಪಿ ಡ್ಯೂಟಿಮೇಲೆ ಥೇಟರಿನಲ್ಲಿದ್ದಾನೆ" ಎಂದು ಹೇಳಿದನೆಂದು ನಮ್ಮೂರಿನಲ್ಲಿ ಒಂದು ಐತಿಹ್ಯವಿದೆ.

* * *

ತಾತ್ಯಾಟೋಪಿ ಎಂತಹವನೇ ಆಗಿರಬಹುದು; ಮುಗಿಲುಹಳ್ಳಿಯವರೇನೂ ಸುಮ್ಮನೆ ಕುಳಿತಿರಲಿಲ್ಲ. ಕೇಳೀ ಮಗ್ನನಾದ ತನ್ನನ್ನು ಹಿಡಿಯಲು ಬಂದ ತಾತ್ಯಾಟೋಪಿಯನ್ನು ಕೂಡಲೇ ಬೇರೆ ಊರಿಗೆ ಟ್ರಾನ್ಸ್‌ಫರ್ ಮಾಡಿಸುವೆನೆಂದು ಗೂಗೆ ಬಸಣ್ಣ, ಮಂತ್ರಿಗಳಿಗೆ ಹೇಳಿ ಟ್ರಾನ್ಸ್‌ಫರ್ ಮಾಡಿಸಿಯೇ ಬಿಟ್ಟ. ಆದರೆ ಕತ್ತೆ ಸಂಕಣ್ಣ ಹೋಗಿ ಅದನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬಂದ.

ಗುರ್ಗಮ್ಮನ ಜಾತ್ರೆಯಲ್ಲಿ, ಕೋಣ ಕಡಿಯುವುದಕ್ಕೆ ತಾತ್ಯಾಟೋಪಿ ಅವಕಾಶ ಕೊಡಲೇ ಇಲ್ಲ. 'ನಮ್ಮೂರು ದುರ್ಗಮ್ಮ ಬಹಳ ಸಿಟ್ಟಿನ ದೇವರು. ತಾತ್ಯಾಟೋಪಿ ಕೆಟ್ಟ' ಎಂದು ಜನ ಮಾತಾಡಿಕೊಂಡರು. ತಾತ್ಯಾಟೋಪಿಗೆ ದುರ್ಗಮ್ಮ ಏನೂ ಮಾಡಲಿಲ್ಲ. ಆದರೆ ದುರ್ಗಮ್ಮನ ಧರ್ಮದರ್ಶಿ ಕತ್ತೆ ಸಂಕಣ್ಣ ರೇಗಿ ತಾತ್ಯಾಟೋಪಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದ.

ಅದನ್ನು ಕೇಳಿದ ಮುಗಿಲುಹಳ್ಳಿ ಪ್ರಾಣಿದಯಾ ಸಂಘದ ಕಾರ್ಯದರ್ಶಿ ಹಾಗೂ ಫ್ಯಾಕ್ಟರಿ ಓನರ್ ಅಜಿತನಾಥರು, ತಾತ್ಯಾಟೋಪಿಯ ವರ್ಗವನ್ನು ಕ್ಯಾನ್ಸಲ್ ಮಾಡಿಸಿಕೊಂಡು ಬಂದರು. ಹಲವು ದಿನಗಳಲ್ಲಿ ಅವರ ಫ್ಯಾಕ್ಟರಿಯಲ್ಲಿ ಮುಷ್ಕರ ನಡೆಯಿತು. ಆಗ ಕಾರ್ಮಿಕರ ಗೂಂಡಾವರ್ತನೆಯನ್ನು ಅಜಿತನಾಥರು ಖಂಡಿಸಿ ತಮ್ಮ ರಕ್ಷಣೆಗಾಗಿ ಪೋಲೀಸ್ ಸಹಾಯ ಕೇಳಿದರು. ತಾತ್ಯಾಟೋಪಿ ಇನ್ವೆಸ್ಟಿಗೇಷನ್ ನಡೆಸಿ ಕಾರ್ಮಿಕರು ಗುಂಡಾವೃತ್ತಿ ನಡೆಸಿಲ್ಲ ಎಂದದ್ದರಿಂದ ಅಜಿತನಾಥರು ತಾತ್ಯಾಟೋಪಿಗೆ ಟ್ರಾನ್ಸ್‌ಫರ್ ಮಾಡಿಸಿದರು. ಅಷ್ಟು ಹೊತ್ತಿಗೆ ತಾತ್ಯಾಟೋಪಿಯೂ ತನಗೆ ಟ್ರಾನ್ಸ್‌ಫರ್ ಬೇಕೆಂದು ಕೇಳಿದ. ಸರ್ಕಾರ ಅದೇ ರೀತಿ ಆಜ್ಞೆ ಮಾಡಿತು.

ಆದರೆ ಮುಗಿಲುಹಳ್ಳಿಯ ತರುಣ ಎಂ. ಎಲ್. ಎ ರಾಯರು ದೊಡ್ಡ ಗದ್ದಲ ಎಬ್ಬಿಸಿ "ಮುಗಿಲು ಹಳ್ಳಿಯಲ್ಲಿ ಮನುಷ್ಯ ಮಾತ್ರರಿರಬೇಕೋ ಬೇಡವೋ ತಾತ್ಯಾಟೋಪಿಗೆ ಟ್ರಾನ್ಸ್‌ಫರ್ ಆದರೆ ಅಖಿಲ ಭಾರತ ಪಶು ಪ್ರದರ್ಶನಗಳನ್ನು ಏರ್ಪಡಿಸುವ ಅವಶ್ಯಕತೆಯೇ ಇಲ್ಲ. ಮುಗಿಲು ಹಳ್ಳಿಯೇ ಆ ಕೆಲಸ ಮಾಡುತ್ತದೆ" ಎಂದು ಬಹಿರಂಗ ಹೇಳಿಕೆ ಕೊಟ್ಟು ಆರ್ಡರ್ ಹೊರಬರುವುದನ್ನು ನಿಲ್ಲಿಸಿ ಬಿಟ್ಟರು.

"ಈ ಶನಿ ತೊಲ್ಗಲ್ಲ ಬಿಡ್ರೋ. ಬ್ಯಾತಾಳ್ದಂಗೆ ಬೆನ್ಹತ್ತೈತೆ" ಎಂದು ಕೊಂಡರು ಎಲ್ಲರೂ.

ಸುಮಾರು ಒಂದು ವರ್ಷದ ಕೆಳಗೆ "ಮುಗಿಲುಹಳ್ಳಿಯಲ್ಲಿ ಸಂಪೂರ್ಣ ಶಾಂತಿ" ಎಂದು ವಿಶ್ವದ ಪ್ರಮುಖ ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಯ್ತು. ಬರ್ಲಿನ್ ಸಮಸ್ಯೆ, ಕಾಶ್ಮೀರ ಸಮಸ್ಯೆ, ಕೋರಿಯಾ ಪ್ರಾಬ್ಲಂ, ಫಾರ್ಮೋಸಾ ಡೆಡ್ಲಾಕ್‌ಗಳಷ್ಟೇ ಜಟಲವೂ, ಆದರೆ ಅವಕ್ಕಿಂತ ಪುರಾತನವೂ ಆದ ಸಮಸ್ಯೆಯನ್ನು ತಾತ್ಯಾಟೋಪಿ ನಿರಾಯಾಸವಾಗಿ ಪರಿಹಾರ ಮಾಡಿದ.

* * *

ತಾತ್ಯಾಟೋಪಿ ನನ್ನ ಮಿತ್ರ. ಅವನಿಗೆ ನನ್ನಲ್ಲಿ ತುಂಬಾ ವಿಶ್ವಾಸ. ಅದು ಹೇಗೆ ? ಎಂಬ ಪ್ರಶ್ನೆಗೆ ಮುಗಿಲು ಹಳ್ಳಿಯ ಇತಿಹಾಸದಲ್ಲಿ ನಾನಾಗಲೇ ಉತ್ತರ ಕೊಟ್ಟಿದೇನೆ.

ಅದನ್ನು ತಿಳಿದವರ ಅವಗಾಹನೆಗಾಗಿ ನಮ್ಮ ಸ್ನೇಹಕ್ಕೆ ಕಾರಣವನ್ನು ಸೂಕ್ಷ್ಮ ವಾಗಿ ತಿಳಿಸುತ್ತೇನೆ. ತಾತ್ಯಾಟೋಪಿ, ನವ್ಯಕಾವ್ಯಪ್ರಿಯ. ಹಿಂದೆ ನಾನೊಂದು ಪದ್ಯ ಬರೆದಿದ್ದೆ.

ನರಕದಲಿ ಊರ್ವಶೀ ವಿರಹ
ಪರಮಾಣುವಿಗೆ ಸೈಕ್ಲೋಟ್ರಾನಿನಲಿ ಸೌಖ್ಯ
ಕಲಿಗೆ ಕಂಬಷ್ಚನಿಂಟರ್ನಲ್
ಚುಚ್ಚು ನಳನಿಗೆ ಹೈಡ್ರೊಫೋಬಿಯಾ

ಅದರರ್ಥ ನನಗೇ ಇನ್ನೂ ಆಗಿಲ್ಲವೆಂದ ಮೇಲೆ ಅವನಿಗೆ ಹೇಗಾಗಬೇಕು ? ಅದರರ್ಥ ವನ್ನು ತಿಳಿದುಕೊಳ್ಳಲು ತಾತ್ಯಾಟೋಪಿ ನನಗೆ ಹತ್ತಾರು ಬಾರಿ ಕಾಫಿ ಕೊಡಿಸಿದ್ದ!

ನಮ್ಮ ಈ ಆತ್ಮೀಯತೆ ಯಾರಿಗೂ ಗೊತ್ತಿಲ್ಲ ಅದುದರಿಂದಲೇ ನನ್ನನ್ನು ಹುಡುಕಿಕೊಂಡು ತಾತ್ಯಾಟೋಪಿ, ಕಳೆದ ತಿಂಗಳು, ಊರಲ್ಲೆಲ್ಲಾ ಅಲೆದಾಡಿದಾಗ ಜನರೆಲ್ಲಾ ನನ್ನ ಬಗ್ಗೆ ಸಂಶಯಗ್ರಸ್ತರಾದುದು ಆಶ್ಚರ್ಯವಲ್ಲ. ಹೋದ ತಿಂಗಳೆಲ್ಲಾ ನಾನು ಮುಗಿಲುಹಳ್ಳಿಯಲ್ಲಿರಲೇ ಇಲ್ಲ.

ಈ ತಿಂಗಳ ಆದಿಭಾಗದಲ್ಲಿ ನಾನು ಮುಗಿಲುಹಳ್ಳಿಗೆ ಬಂದೆ. ರೈಲಿಳಿದು ಹತ್ತು ಹೆಜ್ಜೆ ಕೂಡ ಇಟ್ಟಿರಲಿಕ್ಕಿ ತಾತ್ಯಾಟೋಪಿ ಪ್ರತ್ಯಕ್ಷನಾದ. ಹತ್ತಾರು ಜನ ಕನಿಷ್ಠ ಬಿಲ್ಲೆಗಳು 'ಬಂದ್ರಾ ಸಾರ್' ಎಂದು ತಾತ್ಯಾಟೋಪಿಗೆ ಹೇಳಿ, 'ಎಲ್ಲಿಗೆ ಹೋಗಿದ್ರೀ ? ನಿಮ್ಮನ್ನೆಷ್ಟು ಹುಡ್ಕೋದು ?' ಎಂದು ಕಹಿಯಾಗಿ ನನ್ನ ಕಿವಿಯಲ್ಲಿ ಪಿಸುಗುಟ್ಟಿದರು.

"ಏನ್ಸಾರ್ ? ಅರಾಮಾಗಿ ಹೊರಟದೀರಿ ?" ಎಂದೆ. ತಾತ್ಯಾಟೋಪಿ ಪ್ಲೇಸ್ ಡ್ರೆಸ್ಸಿನಲ್ಲಿದ್ದ.

"ಆರಾಂ ಎಲ್ಲೀದ್ರೀ ? ಕೂಳು, ನೀರು, ನಿದ್ದೆ ಇಲ್ಲದೆ ಹನ್ನೆರಡು ವರ್ಷ ವಾಯಿತು."

"ಒಂದು ಕತ್ತೆ ವಯಸ್ಸು"

"ಏನಂದ್ರೀ ?"

"ಕತ್ತೆ ಹನ್ನೆರಡು ವರ್ಷ ಬದುಕಿರುತ್ತಂತೆ ಸಾರ್ ರೇಗಬೇಡಿ."

"ಹೌದು ಬಿಡ್ರಿ. ಕತ್ತೆ ಹಾಗೆ ದುಡಿದು ನನ್ನ ಮೈ ನರನರವೂ ಕಿರು ಗುಟ್ಟುತ್ತಾ ಇದೆ."

"ಚಿಂತೆ ಮಾಡ್ಬೇಡಿ ಸರ್. ಭವಿಷ್ಯ ಉಜ್ವಲವಾಗಿದೆ. ತೃತೀಯ ಪಂಚ ವಾರ್ಷಿಕಯೋಜನೆಯ ಅಂತ್ಯದಹೊತ್ತಿಗೆ ರಾಷ್ಟ್ರೀಯ ಆದಾಯ ಇಮ್ಮಡಿಸಿರುತ್ತದೆ."

"ಭಾವನ ಭಾವನಿಗೆ ಆರ್ನೂರು ಕುದ್ರೆ ಸರದಾರಗಿರಿಯಿದ್ದ ಹಾಗೆ."

"ಏನ್ಸಾರ್ ಸಮಾಚಾರ ?"

"ಶುದ್ಧ ಅನ್ಯಾಯ ಕಣ್ರೀ. ನನಗೆ ಪ್ರಮೋಷನ್ ಸಿಕ್ಕಿತು."

"Congrats Sir ಸತ್ಯಮೇವ ಜಯತೇ"

"ಹೌದು, ನೂರು ಬಾರಿ ಅಸತ್ಯ ಗೆದ್ದಮೇಲೆ ಸತ್ಯ ಗೆಲ್ಲುತ್ತದೆ. ಆಗ ಸತ್ಯ ಗೆದ್ದರೇನು ಬಿಟ್ಟರೇನು ? ಮತ್ತೆ ಮುಂದಿನ ನೂರು ಬಾರಿ ಅಸತ್ಯ ಗೆಲ್ಲುತ್ತದೆ."

ತಾತ್ಯಾಟೋಪಿಯ ಧ್ವನಿಯಲ್ಲಿ ಅತೃಪ್ತಿ ಎದ್ದು ಕಾಣುತ್ತಿತ್ತು. ಸತ್ಯ ಧರ್ಮ ನ್ಯಾಯಗಳ ರಕ್ಷಕರ ಧ್ವನಿ ಹಾಗಿರಬಾರದು ಎಂದು ನನ್ನ ಅಭಿಪ್ರಾಯ. ಇಂಥ ಧ್ವನಿಯುಳ್ಳವರು ಸತ್ಯ ಧರ್ಮ ನ್ಯಾಯಗಳನ್ನು ರಕ್ಷಿಸುವುದಿಲ್ಲ. ಇವನಿಗೇನೋ ಆಗಿದೆ ಎಂದುಕೊಂಡೆ ತಾತ್ಯಾಟೋಪಿ ಮಾತನ್ನು ಮುಂದುವರಿಸಿದ.

"ಡಿಪಾರ್ಟ್‌ಮೆಂಟಿನಲ್ಲಿ ಹನ್ನೆರಡು ವರ್ಷ ದುಡಿದಿದ್ದಕ್ಕೆ ಈಗ ಪ್ರಮೋಷನ್ ಹಳೇ ಗ್ರೇಡಿನಲ್ಲಿ ಇನ್ನೊಂದು ಇಂಕ್ರಿಮೆಂಟ್ ಸಿಕ್ಕಿದ್ದಿದ್ದರೆ ನನಗೆ ಹೊಸ ಕೆಲಸದಲ್ಲಿ ಸಿಕ್ಕುವಷ್ಟೇ ಸಂಬಳ ಬರುತ್ತಿತ್ತು."

ಅಹೋ! ಜೀವಲೋಕವು ದುಃಖಬಹುಳವಾದುದು! ಕಷ್ಟವು! ಕಷ್ಟವು! ಬದುಕೊಂದು ಘೋರ! ಸತ್ಯ ಧರ್ಮನ್ಯಾಯಗಳ ರಕ್ಷಕನಿಗೂ ಇಂಕ್ರಿಮೆಂಟ್, ಸರ್ವಿಸ್, ಪ್ರಮೋಷನ್ ಸ್ಕೇಲುಗಳ ಚಿಂತೆ ತಪ್ಪಿದ್ದಲ್ಲ!

ತಾತ್ಯಾಟೋಪಿ ಕ್ಯಾಕರಿಸಿ ಉಗುಳಿದ. ಅವನ ಕಣ್ಣುಗಳಲ್ಲಿ ವಿಚಿತ್ರ, ವಿಸ್ಮಯಕರ, ಭಯಾನಕ, ರುದ್ರ ಮಿಶ್ರಿತವಾದ ಹೊಳಪೊಂದು ಕಂಡು ಬಂತು. ಇಂದ್ರನ ಸಭೆಯಲ್ಲಿ ಊರ್ವಶಿಯ ಭಾಗ ನೃತ್ತವನ್ನು ನೋಡಿದಾಗ ಅರ್ಜುನನ ಕಣ್ಣಲ್ಲೂ ಅದೇ ತೇಜಸ್ಸು ಇತ್ತು ಎಂದು ಬಲ್ಲವರು ಹೇಳುತ್ತಾರೆ.

ಆ ಕ್ಷಣದಲ್ಲೇ ಅಜಾಂಡ ಮಂಡಲ ಗಡಗಡನೆ ನಡುಗಿತು. ಸತ್ಯ ಧರ್ಮ ನ್ಯಾಯಗಳಿಗ ಮೈನೋವುಂಟಾಯಿತು ಲಕ್ವಾ ಹೊಡೆದಂತೆ. ಅವು ನಿಶ್ಚೇತನವಾಗಿ ಬಿದ್ದಂತೆ ತೋರಿತು. ತಾತ್ಯಾಟೋಪಿ ಮಾತನ್ನು ಮುಂದುವರಿಸಿದ.

"ನಾನು ಪ್ರಮಾಣಿಕನಾಗಿ ದುಡಿದದ್ದರಿಂದ ನನ್ನ ಮೈ ಮುರಿಯಿತು, ಜನ ಹೆದರಿದ್ದಾರೆ. ಆದರವರ ನಿಯಮಬಾಹಿರ ವೃತ್ತಿಯೇನೂ— ನಾಶವಾಗಲಿಲ್ಲ. ನನ್ನ ಸುತ್ತಮುತ್ತಲಿನ ಚಿಲ್ರೆಪುಟ್ಟೆ ಆಳುಕಾಳುಗಳು ಸಹೋದ್ಯೋಗಿಗಳು, ಮೇಲಿನವ ರೆಲ್ಲಾ ಮನೆಕಟ್ಟೆ ಮದುವೆಮಾಡುತ್ತಿದಾರೆ. ನಾನೋ! ಈ ನೀಚ ನಿಸ್ವಾರ್ಥ ದಿಂದೇನು ಫಲ? ಅಪ್ರಯೋಜಕ ಪ್ರಮಾಣಿಕತೆಯಿಂದ ಯಾವ ಪುರುಷಾರ್ಥ?"

ಆಗ ಅಜಾಂಡಮಂಡಲವನ್ನು ಭೇದಿಸಿ ನನ್ನ ಕಿವಿಗೊಂದು ಆರ್ತನಾದ ಕೇಳಿತು. ಕಣ್ಣುಮುಚ್ಚಿದೆ. ಮನಃಪಟಲದಲ್ಲಿ ಸತ್ಯ, ಧರ್ಮ, ನ್ಯಾಯಗಳು ನನ್ನನ್ನು "ಉತ್ತಿಷ್ಠ" ಎಂದು ಪ್ರಾರ್ಥಿಸಿಕೊಂಡಂತೆ ಆಯಿತು.

"ಏಕೆ?" ಎಂದು ನಾನವಕ್ಕೆ ಸವಾಲು ಹಾಕಿದೆ. "ಏಕೆ? ನಾನೇಕೆ ನಿಮ್ಮ ಪರವಾಗಿ ವಾದಿಸಬೇಕು? ನಿಮ್ಮಿಂದೇನು ಪ್ರಯೋಜನ? ಇನ್‌ಕ್ರಿಮೆಂಟೇ? ಪ್ರಮೋಷನ್ನೇ? ನಂಬಿದರೆ ಬಾಳಿಗೆ ಸಂಚಕಾರ. ಸಾಕಿನ್ನು, ತೊಲಗಿದರೆ ಒಳಿತು. ನಿಮ್ಮನ್ನು ತುಳಿಯುವವರಿಗೇ ಈಗ ಕಾಲ."

"ಆದರೂ...." ಎಂದವು ಅವೆಲ್ಲ. ನಾನು ಕರಗಿದೆ.

"ಆದರೂ ಸರ್.." ಎಂದೆ ನಾನು, "ಆದರೂ ನೀವು ಸತ್ಯ. ಧರ್ಮ, ನ್ಯಾಯ, ನಿಸ್ವಾರ್ಥ, ಪ್ರಮಾಣಿಕತೆಯನ್ನು ಬಿಡಲಾರಿರಿ. ಹೊಟ್ಟೆಯುರಿಯುತ್ತದೆ. ಆದರೇನಂತೆ? ಧರ್ಮರಾಯ ಪ್ರಾಮಾಣಿಕನಾಗಿದ್ದ. ಅವನಿಗೆ ಪ್ರಮೋಷ ಸಿಕ್ಕುವ ಹೊತ್ತಿಗೆ ಮುಪ್ಪು ಬಂತು. ಜೋಬ್ ಧರ್ಮಪರನಾದರೂ ಅವನಿಗೆ ಇಂಕ್ರಿಮೆಂಟ್ ಸಿಗಲಿಲ್ಲ, ಕಟ್ಟಿಸಿದ್ದ ಮನೆ ಹೋಯ್ತು. ಮದುವೆಯಾದ ಮಕ್ಕಳು ಹೋದರು. He bewailed ಆದರೆ he hath not committed any blasphemy in that."

ತಾತ್ಯಾಟೋಪಿ ಇನ್ನೂ ಯಾವ ನಿಶ್ಚಯವನ್ನೂ ಮಾಡದಿದ್ದರೂ ಅವನ ಕಣ್ಣುಗಳಲ್ಲಿದ್ದ ಅರ್ಜುನ ಕಾಂತಿ ಹೋಗಿತ್ತು. ನಾನು ಮುಂದುವರಿಸಿದೆ.

"ಇದನ್ನೇ ನಾನೊಂದು ಪದ್ಯದಲ್ಲಿ ಚಿತ್ರಿಸಿದೇನೆ ಸಾರ್."

"ಅದೇನು ಹೇಳ್ರೀ ಅರ್ಥಾನೂ ಕೂಡಾ."

"ಸಾರ್ ಕಾಫಿ ಕುಡಿಯೋಣ ಬನ್ನಿ. ಹೋಟಲಲ್ಲಿ ಎಲ್ಲಾ ಹೇಳುತ್ತೇನೆ. ಆದರೆ ಒಂದು ಕಂಡಿಷನ್, ಬಿಲ್ ನಾನೇ ಕೊಡುತ್ತೇನೆ."

* * *

ತಾತ್ಯಾ ಟೋಪಿ ಕೆಲವು ದಿನಗಳ ಹಿಂದೆ ಹೊರಟುಹೋದ. ಅವನು ಹೋದ ಕೂಡಲೇ ಸತ್ಯ, ಧರ್ಮ, ನ್ಯಾಯಗಳು ವಿರಹಬಾಧೆ ತಡೆಯಲಾರದೆ, ಕಳ್ಳ ಬಟ್ಟಿ ಸರಾಯಿ ಕುಡಿದು ಮುಗಿಲುಹಳ್ಳಿಯ ಬೀದಿಯಲ್ಲಿ ಕುಕ್ಕುಟ ನೃತ್ಯಮಾಡಿ, ಎಚ್ಚರತಪ್ಪಿ ಬಿದ್ದವು ಕತ್ತಿ ಸಂಕಣ್ಣ, ಗೂಗೆ ಬಸಣ್ಣ, ಅಜಿತನಾಥ, ಚೌಕಿಪೇಟೆ, ತಂಬಾಕಪೇಟೆ, ಗರಡಿಗಳ ಧೀರರು, ಮಧುಮತ್ತರು, ಓಸೀ ಪ್ರಿಯರು, ಶ್ರೀ ಸಾಮಾನ್ಯರು ಅವನ್ನು ತುಳಿದು, ತಮ್ಮ ಪೂರ್ವ ದುರ್ವ್ಯಾಪಾರಗಳನ್ನು ಮಾಡಲಾರಂಭಿಸಿದರು. ಆದರೂ ಕೂಡಾ 'ಮುಗಿಲು ಹಳ್ಳಿಯನ್ನು ದಕ್ಕಿಸಿಕೊಂಡವನು ಯಾವನೂ ಇಲ್ಲ' ಎಂಬ ನಮ್ಮೂರವರ ಜಂಭ ಅಳಿಯಿತು.

ಕಾಲಚಕ್ರಂ ಪೊರಳೆ ಮುರ್ಚಿದುದು ಬೆಳಕಕ್ಕುಂ, ಇರ್ದುದಿಲ್ಲಕ್ಕುಂ.

—ಅ. ರಾ. ಸೇ.

ಭೂಮಿ ಮಾಲೀಕತ್ವಕ್ಕೆ ತಲೆ ತಹಬಂದಿ ತರುತ್ತಾರಂತೆ.

—ತಲೆಯೇ ಇಲ್ಲದೇ ಇರೋರು ತಲೆಯೇ ಇಲ್ಲದೇ ಇರೋರಿಗೆ ತಹಬಂದಿ ತರೋದು ಸಹಜ ಅಲ್ಲವೇ?

* * *

ದೆಹಲಿಯಲ್ಲಿ ರಾಷ್ಟ್ರೀಯ ನಾಟಕೀಯ ಶಾಲೆ ಆರಂಭಿಸಲ್ಪಟ್ಟಿದೆಯಂತೆ.

—ಗಮನಿಸಿ! ನಾಟಕೀಯ ರಾಷ್ಟ್ರ ಶಾಲೆ ಯಾವಾಗಲೋ ಆರಂಭಿಸಲ್ಪಟ್ಟು ಹತ್ತೂ ಹೆಚ್ಚು ವರ್ಷಗಳಾದುವು. ಅಲ್ಲವೇ?

* * *

ಸಮತಾ ಸಮಾಜದಲ್ಲಿ ಎಲ್ಲರ ಅಂತ್ಯ ಕ್ರಿಯೆಗಳನ್ನೂ ಒಂದೇ ರೀತಿಯಲ್ಲಿ ನಡೆಸಬೇಕೆಂಬ ಸೂಚನೆ ಇನ್ನೂ ಬಂದಿಲ್ಲವಂತೆ.

* * *

ಟಾಂಗ್ ಕೊಟ್ಟರೂ ನಗಲೇಬೇಕು

ಪಂಡಿತ ಶಾಮಾವಧಾನಿಗಳು ಪ್ರಾಯ್ಮರಿ ಶಾಲೆಯಲ್ಲಿ ಸಂಸ್ಕೃತದ ಮಾಸ್ತರು. ಹಾಗೂ ಲೆಕ್ಕದ ಪಾಠಗಳನ್ನೂ ಹೇಳಿಕೊಡುತ್ತಿದ್ದರು. ಅವರಿಗೆ ಬರುವ ಸಂಬಳದಲ್ಲಿ ಜೀವನಕ್ಕೆ ಕಷ್ಟ. ಅಂದ ಮೇಲೆ ಮನೆ ಪಾಠಗಳಿಂದಲೇ ಜೀವನಪಥ ಸಾಗಬೇಕಾಗಿತ್ತು.

ಸಾಹುಕಾರ್ ತಮ್ಮಯ್ಯನವರಿಗೆ ಒಬ್ಬನೇ ಮಗ. ಏಳು ವರ್ಷ. ಅವನನ್ನು ಚೆನ್ನಾಗಿ ಓದಿಸಿ, ಪ್ರತಿಯೊಂದು ತರಗತಿಯಲ್ಲೂ ಮೊದಲ ರ್‍ಯಾಂಕು ಬರುವಂತೆ ಮಾಡಬೇಕು ಮುಂದೆ ಕುಮಾರ ಕಂಠೀರವ ಅಖಿಲಭಾರತ ಅಡ್ಮಿನಿಸ್ಟ್ರೇಟಿವ್ ಪರಿಕ್ಷೆಯಲ್ಲಿ ಮೊದಲಿಗನಾಗಿ, ಸರ್ಕಾರಿ ಆಫೀಸರಾಗಿ, ಗಣಿ ಲೈಸೆನ್ಸ್ ಕೊಡುವ ಅಧಿಕಾರಿಯಾಗಬೇಕೆಂಬ ಹಿರಿಯ ಹಂಬಲ ತಂದೆಗೆ.

ಬಲು ಕಷ್ಟಪಟ್ಟು ಶಾಮಾವಧಾನಿಗಳು ತಪಸ್ಸು ಮಾಡಿದಂತೆ ಕುಮಾರ ಕಂಠೀರವನಿಗೆ ಕಲಿಸುತ್ತಿದ್ದರು. ಎಲ್ಲಾ ಮಾಸ್ತರುಗಳನ್ನು ಕಾಡಿ ಬೇಡಿ ಕುಮಾರನಿಗೆ ಜಯ ಬರುವಂತೆ ಸಾಧಿಸುತ್ತಿದ್ದರು.

ಶಿವು ಆರು ವರ್ಷದ ಅನಾಥ ಬಾಲಕ. ದೇವಸ್ಥಾನದಲ್ಲಿದ್ದುಕೊಂಡು ವಾರ ಮಾಡಿಕೊಂಡು, ಜೀವನ ನಡೆಸಿಕೊಂಡು, ಶಾಮಾವಧಾನಿಗಳ ಮನೆಯಲ್ಲಿ ಸುತ್ತು ಕೆಲಸ ಮಾಡಿಕೊಂಡು ಅವರ ಮನೆಯಲ್ಲಿ ಸಂಸ್ಕೃತ ಕಲಿಯುತ್ತಿದ್ದ. ಶಿವುನ ಕಂಡರೆ ಶಾಮಾವಧಾನಿಗಳಿಗೆ ಬಲು ಪ್ರೀತಿ. ಚೂಟಿ ಹುಡುಗ. ಏನು ಕೆಲಸ ಹೇಳಿದರೂ, ನಗುತ ವಾರಣವಾಗಿ ಮಾಡುತ್ತಿದ್ದ ಕುಮಾರ ಕಂಠೀರವನ ತರಗತಿಯಲ್ಲೇ ಓದುತ್ತಿದ್ದ.

ಆ ವರ್ಷ ಶಾಲೆಯ ವಾರ್ಷಿಕೋತ್ಸವಕ್ಕೆ ಉಪಸಚಿವರು ಅಧ್ಯಕ್ಷತೆ ವಹಿಸಿದ್ದರು. ಸೇಠ್ ಗಂಗೂಮಲ್ಲನೊಡನೆ ಆಗಮಿಸಿದ್ದರು. ಶಿವು ಗೀತಾಪಠನ ಮಾಡಿದ್ದನ್ನು ಕೇಳಿ, ಹುಡುಗರಾಡಿದ ಪುಟ್ಟ ಹಿಂದಿ ನಾಟಕ ನೋಡಿ ಗಂಗೂಮಲ್ಲರು ಪ್ರಸನ್ನಗೊಂಡಿದ್ದರು.

"ನೂರು ರೂಪಾಯಿ ಬಹುಮಾನ ಕೊಡುತ್ತೇನೆ" ಶಾಲೆಯ ಹುಡುಗರಿಗೆಲ್ಲಾ ತರಗತಿಗೆ ತಕ್ಕಂತೆ ಒಂದು ಸ್ಪರ್ಧೆ ಪರೀಕ್ಷೆ ನಡೆಸಿ, ಹೆಚ್ಚು ನಂಬರು ತೆಗೆದುಕೊಂಡವನಿಗೆ ಬಹುಮಾನ" ಎಂದು ಗಂಗೂಮಲ್ಲರು ಉಪಸಚಿವರಿಗೆ ಹೇಳಿದರು. ಅಧ್ಯಕ್ಷಪೀಠದಿಂದ ಉಪಸಚಿವರು ಇದನ್ನು ಬಹಿರಂಗಪಡಿಸಿ, ಹತ್ತು ನಿಮಿಷ ಗಂಗೂಮಲ್ಲರ ಮುಖ ಸ್ತುತಿಯನ್ನು ಬಾಯಿತುಂಬ ಮಾಡಿದರು.

ಸ್ಪರ್ಧಾ ಪರೀಕ್ಷೆ ಏರ್ಪಾಡಾಯಿತು. ತರಗತಿಗಳೊಂದೊಂದರಲ್ಲೂ, ಭಾಷೆ, ಗಣಿತ. ಚರಿತ್ರೆ, ಭೂಗೋಳದ ಒಂದು ಪ್ರಶ್ನಪತ್ರಿಕೆ ಅರ್ಧಗಂಟೆಕಾಲದ್ದು ಏರ್ಪಾಡಾಗಿತ್ತು. ಹುಡುಗರೆಲ್ಲಾ ಉತ್ಸಾಹದಿಂದ ಓದಿ ಪರೀಕ್ಷೆಗೆ ಕುಳಿತಿದ್ದರು.

ಶಾಮಾವಧಾನಿಗಳಿಗೆ ಉತ್ತರದ ಪತ್ರಗಳು ಬಂದುವು. ಕುಮಾರ ಕಂಠೀರವನ ಪೇಪರನ್ನು ಓದಿದರು. ತಾವು ಮೊದಲೇ ಹೇಳಿಕೊಟ್ಟ ಉತ್ತರಗಳನ್ನು ಅವ ಬರೆಯುವುದರಲ್ಲಿ ಹತ್ತೂ ತಪ್ಪುಮಾಡಿದ್ದ. ಅವನಿಗೆ ಅರವತ್ತು ನಂಬರು ಹಾಕಬಹುದು ಎಂದುಕೊಂಡರು ನಂತರ ಕೈಗೆ ಬಂದ ಉತ್ತರ ಪತ್ರಿಕೆಗಳೆಲ್ಲವೂ ಸಪ್ಪೆ, ಪರವಾಗಿಲ್ಲ ಕುಮಾರ ಕಂಠೀರವನಿಗೆ ಬಹುಮಾನ ಎಂದುಕೊಂಡರು. ಆಗ ಅವರಕೈಗೆ ಶಿವುವಿನ ಉತ್ತರದ ಪತ್ರ ಬಂತು. ಹಾಳೆಹಾಳೆಯಾಗಿ ಓದಿದರು. ತಲೆ ತೂಗಿದರು. ನೂರಕ್ಕೆ ತೊಂಭತ್ತು ಕೊಡಬಹುದು ಎಂದುಕೊಂಡರು.

ಆಗ ಸಾಹುಕಾರ್ ತಮ್ಮಯ್ಯನವರ ನೆನಪಾಯ್ತು. ಮನೆ ಮಾಸ್ತರ ಸಂಬಳ ಜ್ಞಾಪಕಕ್ಕೆ ಬತು. ಸಾಹುಕಾರರ ಹಿರಿಯ ಹಂಬಲವೂ ನೆನಪಿಗೆ ಬಂತು.

"ಏನು ಕಷ್ಟ ಬಂದರೂ ಶಿವು ಎದುರಿಸಲು ಕಲಿತಿದ್ದಾನೆ. ಬಡ ಹುಡುಗ. ಒಟ್ಟಿಗೆ ನೂರು ರೂಪಾಯಿ ಬಂದರೆ ತಲೆ ತಿರುಗಿಹೋಗಬಹುದು. ಆದರೆ ಕುಮಾರ ಕಂಠೀರವನಿಗೆ ಬಹುಮಾನ ದೊರಕಿದರೆ ಅವನ ತಂದೆ ಹಿಗ್ಗಿ ಹೀರೇಕಾಯಿ ಆಗುತ್ತಾರೆ, ಮಸಲಾ ಸಾಹುಕಾರರು ಬಹುಮಾನದ ಮೊತ್ತವನ್ನು ನನಗೇ ಕೊಟ್ಟರೂ ಕೊಟ್ಟಾರು, ಆಗ ಶಿವುಗೆ ನಾನೇ ಒಂದು ಷರ್ಟು ಒಂದು ಪಂಚೆ ತೆಗೆದು ಕೊಟ್ಟರಾಯ್ತು ಹೀಗೆಲ್ಲಾ ಯೋಚಿಸಿ, ಶಾಮಾವಧಾನಿಗಳು ಕುಮಾರನಿಗೆ ೮೦, ಶಿವುಗೆ ೬೦ ಅಂತ ಬರೆದರು.

ಸಾಹುಕಾರರು ಹಿರಿ ಹಿಗ್ಗಿ ಕುಮಾರ ಸಂಪಾದಿಸಿದ ಬಹುಮಾನದಲ್ಲಿ ತಾವೇ ಒಂದು ಅಂಗಿ ಹೊಲಿಸಿಕೊಂಡರು ಶಿವು ಕೂಡ ನಗುತ್ತಲೇ ಇದ್ದ. "ಮುಂದಿನ ಸರ್ತಿ ಚೆನ್ನಾಗಿ ಓದಿಕೊಳ್ಳಬೇಕು. ಹಣ ಬಂದಿದ್ದರೆ ಒಂದೆರಡು ಪುಸ್ತಕ ಕೊಂಡುಕೊಂಡು ಓದಬಹುದಾಗಿತ್ತು" ಎಂದು ಅಂದುಕೊಂಡ.

ಶಾಮಾವಧಾನಿಗಳು ದೇವರಪೂಜೆಯನ್ನು ಇನ್ನಷ್ಟು ಹೆಚ್ಚು ಹೊತ್ತು ಮಾಡಲಾರಂಭಿಸಿದರು.

ವಿಧಿ ಟಾಂಗ್ ಕೊಟ್ಟರೂ ನಗುತ್ತಲೇ ಇರಬೇಕು. ನಗುತ್ತಾ ಇದ್ದರೆ ಟಾಂಗ್ ಕೊಡುತ್ತಾ ಇರುತ್ತೆ.

—ಕುಮಾರ್

ತಪ್ಪೊಪ್ಪುವಿಕೆ

"ಮಥಾಯ್ ವಿಷಯದಲ್ಲಿ ನಾನು ತಪ್ಪು ಒಪ್ಪಿಕೊಳ್ಳುತ್ತೇನೆ. ಆಗ ಮನಸ್ಸು ರೇಗಿತ್ತು ಅದಕ್ಕೇ ಹ್ಞೂ ಅಂದೆ" ಅಂತ ಪಂಡಿತ ಜೀಯವರು ಲೋಕ ಸಭೆಯಲ್ಲಿ ಹೇಳಿದರಂತೆ."

ಇದೇ ರೀತಿ ನಮ್ಮ ನಾಯಕರೆಲ್ಲಾ ಬಹಿರಂಗವಾಗಿ ತಪ್ಪೊಪ್ಪಿಕೊಂಡರೆ ಎಷ್ಟು ಚೆನ್ನ ಅಂತೀರಾ ಉದಾಹರಣೆಗೆ.

ನಮ್ಮ ಮನೆಯಲ್ಲಿ ಮೂರು ಜನ ನಾಯಕರುಂಟು. ನಾಲ್ಕು ಜನ ಪ್ರಜೆಗಳುಂಟು. ನಾನೂ, ನಮ್ಮ ತಂದೆ, ನನ್ನ ಮೊದಲ ಹೆಂಡತಿಯ ಇಬ್ಬರು ಗಂಡು ಮಕ್ಕಳು, ಒಟ್ಟು ನಾಲ್ಕು ಜನ ಪ್ರಜೆಗಳು. ನನ್ನ ಎರಡನೆ ಹೆಂಡತಿ ಮೊದಲ ನಾಯಕಿ. ಆಕೆ ತಾಯಿ, ಹಿರಿಯ ನಾಯಕಿ. ಎರಡನೆ ಹೆಂಡತಿಯ ಒಂದೇ ಮಗು ಮೂರನೇ ನಾಯಕ. ನಾಯಕರುಗಳು ಹೇಳಿದಂತೆ ಕೇಳುವುದು ಪ್ರಜೆಗಳ ಕರ್ತವ್ಯ. ಪ್ರಜೆಗಳು ದುಡಿದು ಸಂಪಾದಿಸಿ ತರುವುದನ್ನು ವೆಚ್ಚ ಮಾಡುವುದು ನಾಯಕರ ಕರ್ತವ್ಯ.

ಹೀಗೇ ಸುಮಾರು ದಿನದಿಂದ ನಡೆದು ಬರುತ್ತಿತ್ತು—ನಾಯಕರುಗಳು ತಪ್ಪು ಮಾಡಿದ್ದೇ ಇಲ್ಲ ಅಂತ ಹಠ ಸಾಧಿಸೋರು, ಪ್ರಜೆಗಳು ಸಾಕಷ್ಟು ದುಡಿಯಲಿಲ್ಲ ಎಂದೇ ಅನ್ನುವರು. ಅದಕ್ಕೇ ಆರ್ಥಿಕ ಮುಗ್ಗಟ್ಟು ಎಂದೇ ಸಿದ್ಧಾಂತ ಮಾಡೋರು.

ನೀವು ದುಂದು ಖರ್ಚು ಮಾಡಿದ್ದೀರಿ. ಹೀಗೆಲ್ಲಾ ಉಳಿತಾಯ ಮಾಡ ಬಹುದಿತ್ತು ಎಂದು ಪ್ರಜೆಗಳು ಏನಾದರೂ ದನಿಯೆತ್ತಿದರೆ ನಾಯಕರು "ಎದುರು ದನಿ ನಾವು ಸಹಿಸೋದಿಲ್ಲ" ಎಂದು ರೇಗಿಯೇ ಬಿಡುತ್ತಿದ್ದರು.

ಆದರೆ ಈಗ ದೇಶದ ನಾಯಕರಾದ ಪಂಡಿತಜೀಯವರೇ ತಪ್ಪಾಯ್ತು ಎಂದ ಮೇಲೆ, ನಮ್ಮನೆ ನಾಯಕರೂ ಹಾಗೇ ತಪ್ಪೊಪ್ಪಿಕೊಂಡು, ಮಸಲಾ ಹೀಗಂದರೂ ಅನ್ನಿ :—

ಅತ್ತೆ, "ಅಳಿಯಂದಿರೇ! ನೀವು ಹೇಳಿದ್ದು ದಿಟ. ಆ ದಿನ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆ ಸೆಟ್ಟನ್ನು ಮನೆಗೆ ತಂದಿದ್ದು ದಿಟ. ನೀವು ಬೇಡ. ತುಂಬಾ ಹಣ

ಖರ್ಚಾಗುತ್ತೆ, ನಾವು ಮನೇಲಿ ಮಾಡ್ಕೋ ಅಡಿಗೇನ ಆ ಪಾತ್ರೆಗಳಲ್ಲಿ ಹಾಕಿದರೆ ಸ್ಟೇಯ್ನ್ ಆಗಿಯೇ ಆಗುತ್ತೆ” ಅಂದಿದ್ದೀರಿ. ಆದರೆ ನಾನು ಕೇಳಲಿಲ್ಲ. ಈಗ ನೋಡಿ, ಪಾತ್ರೆಗಳು ಸ್ಟೆಯ್ನ್ ಆಗೋದಿರಲಿ. ತೂತುಗಳೇ ಆಗಿವೆ. ನನ್ನ ಕೋಪಕ್ಕೆ ಅವು ಬಾಳುವಂತಿಲ್ಲ. ನೀವು ಸಲಹೆ ಮಾಡಿದ್ದಂತೆ ಮಡಿಕೆ ಕುಡಿಕೆ ತಂದಿಟ್ಟುಕೊಂಡಿದ್ದರೆ, ಹಣ ಉಳಿಯುತ್ತಿತು. ನನ್ನ ಕೋಪಕ್ಕೂ ತಕ್ಕ ಹತೋಟಿ ಇರುತ್ತಿತ್ತು.” ಅಂತ ತಪ್ಪೊಪ್ಪಿಕೊಂಡರೆ.

ಹೆಂಡತಿ :—“ಹೌದು ಅಂದ್ರೆ ಹ್ಯಾಂಡ್ ಲೂಮ್ ಪ್ರದರ್ಶನದಲ್ಲಿ ಅಮ್ಮಂಗೆ ನನಗೇ ಅಂತ ನಾಲ್ಕು ನಾಲ್ಕು ಸೀರೆ ಕೊಳ್ಳಬಾರದಿತ್ತು—ಮೂರೇ ದಿನದಲ್ಲಿ ಒಡಲಿನ ಬಣ್ಣ ಸೆರಗಿನ ಬಣ್ಣ ಎಲ್ಲಾ ನಿಮ್ಮ ಮುಖದ ಬಣ್ಣಕ್ಕೆ ತಿರುಗಿಕೊಂಡಿದೆ ಗ್ಯಾರಂಟಿ ಸೀರೆ ಅಂತ ಹೇಳಿದೆಯಲ್ಲಾ ಇದೇನೇ ಅಂತ ಅಂಗಡಿಯವನನ್ನು ಕೇಳಿದರೆ ಆತ ಏನಂದ ಗೊತ್ತೆ. ಸೀರೆ ಗ್ಯಾರಂಟಿ ಹರಿದಿದೆಯೇ ? ಎಂದು ಹೇಳಿದ. ಟವಲುಗಳೂ ಹಾಗೇನೆ. ಸ್ನಾನಮಾಡಿ ಮೈ ಒರೆಸಿಕೊಂಡರೆ ಪಿತ್ತದ ಗಂಧೆ ಎದ್ದ ಹಾಗಿರುತ್ತೆ ಮೈಯಲ್ಲೆಲ್ಲಾ. ಅದನ್ನೇನೋ ನಿಮಗೆ ಕೊಡಬಹುದು. ಆದರೂ ದುಡ್ಡು ಪೋಲಾಯ್ತು ಅಂದರೆ. ಆರು ತಿಂಗಳು ಸಂಸಾರ ನಡೆಸಬಹುದಿತ್ತು ಆ ಹಣದಲ್ಲಿ” ಅಂತ ಮಸಲಾ ಹೆಂಡತಿ ತಪ್ಪೊಪ್ಪಿಕೊಂಡು ಹೇಳಿದರೆ ?

ಎರಡನೆಯ ಹೆಂಡತಿಯ ಎಂಟು ವರ್ಷದ ಮಗ.

“ಅಪ್ಪಾ ! ತಪ್ಪಾಯ್ತುಪ್ಪಾ ! ಗೋಡೆ ಮೇಲೆ ನಮ್ಮ ಹೆಡ್ ಮಾಸ್ತರ ಚಿತ್ರ ಬರೀಬಾರದಾಗಿತ್ತಪ್ಪ ಅದೂನೂ ಬರಿಯೋವಾಗ ಸಿಕ್ಕಿಹಾಕಿಕೊಳ್ಳಬಾರದಾಗಿತ್ತಪ್ಪ. ಸಿಕ್ಕಿಹಾಕಿಕೊಂಡಾಗ ಅವರ ಕೈ ಕಚ್ಚಿ ಓಡಿಹೋಗಬಾರದಾಗಿತ್ತಪ್ಪ. ನಾನು ಓಡಿ ಹೋದದಕ್ಕೋಸ್ಕರವೇ ಅವರು ನನ್ನ ಅಟ್ಟಿಸಿಕೊಂಡು ರಸ್ತೆ ಮಧ್ಯೆ ಓಡಿದರಪ್ಪ. ಅದಕ್ಕೇಪ್ಪ ಬಸ್ಸಿಗೆ ಸಿಕ್ಕಿಹಾಕಿಕೊಂಡು ಸತ್ತಿದ್ದಪ್ಪಾ ! ಅಷ್ಟು ದಪ್ಪನಾಗಿರೋರು ಚಿಕ್ಕ ಹುಡುಗರನ್ನು ಅಟ್ಟಿಸಿಕೊಂಡು ಓಡಿದ್ದೆ ತಪ್ಪು ಅಂತ ಅಮ್ಮ ಅಜ್ಜಿ ಅಂತಾರಪ್ಪಾ ! ಆದರೂ ನನ್ನದೇ ಏನೋ ತಪ್ಪು ಅನ್ನಿಸುತ್ತೆ.”

ಎಂದೆಲ್ಲಾ ದಂಟು ಕೀಳುವ ಮಗ ಹೇಳಿ, ತಪ್ಪೊಪ್ಪಿಕೊಂಡರೆ.

—ಎಲ್ಲಾ ‘ರಿ’ ರಾಜ್ಯ ಅಷ್ಟೆ. ಸಣ್ಣದು ಪುಟ್ಟದನ್ನು ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದು. ದೊಡ್ಡದು ಪರಿಣಾಮಕಾರಿಯಾದ್ದು ಅಂದರೆ ಅವರ ಮೂಗಿನ ನೇರವೇ ಚೆಂದ ಅಲ್ಲವೇ ? ಎಲ್ಲ ನಾಯಕರಿಗೂ.

—ಬಚ್ಚಿ

ಹಳೇ-ಬೀಡು

ತುಸು ನಕ್ಕು ನಿಂದಿಹೆನು ಹಳೆಬೀಡಿನೊಡೆಯ
ದೂರದಿಂ ಬಂದಿಹೆನು ದರುಶನಕೆ ದೇವ

ಕಪಿಹೃದಯ ಕಣ್ಣೀರು ಮಿಡಿದು ನಕ್ಕಿತುನೋಡಿ
ಅಳಿದುಳಿದ ಹಳೆಬೀಡ ದೇವಾಲಯ
ಯುವಕಟುಕರಾ ಕಾರ್ಯವನು ಸಾರುತಿದೆ ಇಂದು
ಕಲೆಯ ಬಲಿ ಕೊಲೆಯಾಗಿಹ ದೇವಾಲಯ

ಅಂದು ಆಡಿದ ಸತ್ಯಂ ಶಿವಂ ಸುಂದರಂ.
ಇಂದು ತೋರಿತು ಸತ್ಯಂ ಶವಂ ಸುಂದರಂ.
ಬಾಳಿನಲಿ ಬೆಳಗಬಹುದಾದ ಸೊಗಸು.
ಅಳಿಯುತಿರುವಾಗಲಂತೇ ಇಹುದು ಸೊಗಸು.

ಬೇಲೂರ ದೇವಾಲಯದ ರವಿಬೆಳಕದಿಲ್ಲ
ಹಳೆಬೀಡು ಗುಡಿಯೆಲ್ಲಾ ಬೆಳಕಿನಿಂಬೆಳಗಿದೆ
ಕಲೆ ಪಕ್ವವಾಗಿದೆ ಬೇಲೂರಿಗಿಂತಲೂ.
ಹಳೆಬೀಡಿಗದಕೇನೋ ಪೆಟ್ಟುಬಿತ್ತು.

ತಲೆಯಿಲ್ಲದ ದೇಹ ಕೈಗಳಿಲ್ಲದ ಮೈಯು
ಕಾಲ್ಗಳಿಲ್ಲದ ಟೊಂಕ ಮೂರ್ತಿಗಳಿಗೆ
ಬಾಳಿನಲ್ಲಿ ಇವರೆಲ್ಲಾ ನಾಯಕರು ಆದಂತೆ
ಇವರೆಲ್ಲ ನಮ್ಮ ನಮ್ಮನಸೆಳೆದೆಳೆಯುತ

ಹರುಷ ಸರಸ ಶೋಕ ಬೇಸರ
ಕಲೆಯ ಹಿರಿಮೆ ಕಲೆಯ ಕೊಲೆಯು
ಸುಖವು ಅತ್ತ ಮರುಕವಿತ್ತ ಕಾಣುತಿಹುದು
ಜೀವನದ ಪ್ರತೀಕವಾಗಿಹುದು ಹಳೆಬೀಡು

ಚೆಲುವನಿಧಿ ಉದಿಸಿ ಅಭಿಮಾನಹೊರಸೂಸಿ
ಹಳೆಬೀಡ ಕಂಡತ್ತು ಸುಖಪಟ್ಟೆ ಜೋಷಿ
ಶಿರಬಾಗಿ ವಂದಿಪೆನು ನಿನ ದೈವತ್ವಕೆ
ತುಸು ನಕ್ಕು ನಮಿಸುವೆನು ಪರಾಮಯಗೆ—

ಬೆಂಗಳೂರು :

ಮೆಜೆಸ್ಟಿಕ್-ರೂಪಮಹಲ್ ★ 6-3-1959 ರಿಂದ ಪ್ರಾರಂಭ

- ತಮಿಳು -

ಮೈಸೂರು: **ಪ್ರಭುದೇವ** [ತಮಿಳು] ಚಿತ್ರದುರ್ಗ : **ಯೂನಿಯನ್** [ತೆಲುಗು]

— ಚಿತ್ರಮಂದಿರಗಳಲ್ಲಿ —



ವಿಕ್ರಂ ಹಂಚಿಕೆ

ರಂಜನ್, ರಾಜಸುಲೋಚನ, ಜಾನಕಿ, ರಾಜನಾಲ ಮುಂತಾದವರು.


ಒಮ್ಮೆ ಉಪಯೋಗಿಸಿ ನೋಡಿ-
ಎಷ್ಟು ಸುಂದರ ಉಜ್ವಲ ಪೆಯಿಂಟು!
ಷಾಲಿಮಾರ್ ಸೂಪರ್‌ಲ್ಯಾಕ್ ಸಿಂಥೆಟಿಕ್ ಎನಾಮೆಲ್ –
ಇದೊಂದು ಶೀಘ್ರದಲ್ಲಿ ಗಟ್ಟಿಯಾಗಿ ಒಣಗುವ, ಬಹಳವಾಗಿ
ಥಳಥಳಿಸುವ, ನಿಶ್ಚಿತ ಬಾಳಿಕೆಯಿರುವ, ಒಳಭಾಗಕ್ಕೂ
ಅಥವಾ ಹೊರಭಾಗಕ್ಕೂ ಉಪಯೋಗಿಸಬಹುದಾದ
ಪೆಯಿಂಟಾಗಿದೆ ಇದನ್ನು ಮನೆಯಲ್ಲಿಯ ಮತ್ತು
ಕಾರ್ಖಾನೆಯಲ್ಲಿಯ ಎಲ್ಲಾ ತೆರನಾದ ಜಾಗಗಳ ಮೇಲೆ
ಬ್ರಷ್ಷಿನಿಂದ ಬಳಿಯಬಹುದು,
ಸ್ಪ್ರೇ ಮಾಡಬಹುದು ಅಥವಾ
"ಡಿಪ್" ಮಾಡಿ ಹಚ್ಚಬಹುದು.
33 ಬಣ್ಣಗಳು—ಒಂದರೊಂದಿಗೆ ಮತ್ತೊಂದನ್ನು
ಕಲಸಬಹುದು. 1 ಪೈಂಟ್ ಮತ್ತು 1 ಗ್ಯಾಲನಿನ
ಟಿನ್ನುಗಳಲ್ಲಿ ಹಾಗೂ 5 ಗ್ಯಾಲನಿನ
ಡ್ರಮ್ಮುಗಳಲ್ಲಿ ದೊರೆಯುತ್ತೆ.
ಷಾಲಿಮಾರ್
ಸೂಪರ್‌ಲ್ಯಾಕ್
ಸಿಂಥೆಟಿಕ್ ಎನಾಮೆಲ್
SPW 486 KAN
SHALIMAR PAINT, COLOUR & VARNISH CO, PRIVATE LTD
Calcutta · Bombay · Madras · New Delhi · Kanpur

REG. NO. M. 4718 KORAVANJI. MARCH 1959

Printed by B S Iyengar, Bangalore City.
Publisher—B. N. Gupta. Editor—M Sivaram